ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ನಾಗ್ಪುರ: ಯುಗಾದಿ ಹಬ್ಬ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಡಾ.ಕೇಶವ ಬಲಿರಾಮ್ ಹೆಡಗೇವಾರ್ ಅವರ ಜಯಂತಿಯ ಸಂದರ್ಭದಲ್ಲಿ ಆರೆಸ್ಸೆಸ್ ಕಛೇರಿಗೆ ಪ್ರಧಾನಿ ನರೇಂದ್ರ ಮೋದಿಯವರು ಭೇಟಿ ನೀಡಿ ಡಾ. ಹೆಡಗೇವಾರರ ಸಮಾಧಿ ಸ್ಮೃತಿಮಂದಿರಕ್ಕೆ ಗೌರವ ಸಲ್ಲಿಸಿದರು.

ಸಂಪುಟ : 46 | ಸಂಚಿಕೆ : 24 | ಚೈತ್ರ–ವಿಶಾಖ | ಕಲಿಯುಗಾಬ್ದ 5127 | 15–04–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಆರೆಸ್ಸೆಸ್‌ಗೆ ನೂರರ ಹರೆಯ: ಸಂಘ ಶುರುವಾಗಿದ್ದೇಕೆ? ಸಂಘ ಏನು ಮಾಡಿದೆ?

■ ರಾಧಾಕೃಷ್ಣ ಹೊಳ್ಳ

ಒಬ್ಬ ವ್ಯಕ್ತಿ ನೂರು ವರ್ಷ ಬದುಕುವುದು ವಿಶೇಷವಾದರೂ, ಅಲ್ಲಲ್ಲಿ ಅಂತಹವರು ನೋಡಲು ಕಾಣಸಿಗುತ್ತಾರೆ. ಆದರೆ, ಒಂದು ಸಂಘಟನೆ ನೂರು ವರ್ಷದಲ್ಲಿ ತನ್ನತನವನ್ನು ಕಳೆದುಕೊಳ್ಳದೇ, ಬದಲಾದ ಕಾಲದಲ್ಲಿಯೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡು, ಹೊಸ ತಲೆಮಾರಿನ ಜನರನ್ನು ತನ್ನತ್ತ ಸೆಳೆಯುತ್ತ ಉಳಿಯುವುದು ಮಾತ್ರವಲ್ಲ, ಬೆಳೆಯುತ್ತಲೂ ಇದೆ ಎನ್ನುವುದು ವಿಶೇಷವೇ. ಇಂತಹ ಸಂಘಟನೆಗಳು ಕಾಣಸಿಗುವುದು ಬಹಳ ವಿರಳ. ಆರೆಸ್ಸೆಸ್ ಅಥವಾ ಸಂಘ ಎಂದೇ ಜನಜನಿತವಾದ ಈ ಸಂಘಟನೆಯೇ 'ರಾಷ್ಟ್ರೀಯ ಸ್ವಯಂಸೇವಕ ಸಂಘ'. 1925ರ ವಿಜಯದಶಮಿಯಂದು ಪ್ರಾರಂಭವಾದ ಈ ಸಂಘಟನೆ ಈಗ ನೂರನೇ ವರ್ಷಕ್ಕೆ ಕಾಲಿಡುತ್ತಿದೆ.

ಸಂಘವನ್ನು ಪ್ರಾರಂಭಿಸಿದ ಡಾ. ಕೇಶವ ಬಲಿರಾಮ್ ಹೆಡಗೇವಾರ್ ಅವರು ಮಹಾರಾಷ್ಟ್ರದ ನಾಗಪುರದಲ್ಲಿ ಜನಿಸಿದವರು. ಕೊಲ್ಕತ್ತಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುವಾಗಲೇ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಅವರು, ನಾಗಪುರಕ್ಕೆ ಹಿಂದಿರುಗಿದ ಮೇಲೆ ಕಾಂಗ್ರೆಸ್ಸಿನಲ್ಲಿ ಸಕ್ರಿಯವಾಗಿ ಕೆಲಸ ಮಾಡಿದವರು. ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿ ಮಾರ್ಗ ಹಾಗೂ ರಾಜಕೀಯ ಮಾರ್ಗ – ಇವೆರಡರಲ್ಲೂ ಭಾಗವಹಿಸಿದ ಅವರು, ಸ್ವಾತಂತ್ರ್ಯ ತಂದುಕೊಡಲು ಈ ಮಾರ್ಗಗಳು ಉಪಯುಕ್ತವಾದರೂ, ಸ್ವತಂತ್ರರಾಷ್ಟ್ರವೊಂದನ್ನು ಕಟ್ಟಲು ಇವುಗಳಿಂದ ಸಾಧ್ಯವಿಲ್ಲ ಎಂಬ ನಿಷ್ಕರ್ಷೆಗೆ ಬರಲು ಹೆಚ್ಚು ಕಾಲ ಹಿಡಿಯಲಿಲ್ಲ. ತಮ್ಮ ಅಸ್ಮಿತೆಯನ್ನೇ ಮರೆತ, ಆತ್ಮವಿಶ್ವಾಸವಿಲ್ಲದ, ಸ್ವಾರ್ಥಿಗಳಾದ, ದೇಶಭಕ್ತಿಯಿಲ್ಲದ ಜನರೇ ದೊಡ್ಡ ಸಂಖ್ಯೆಯಲ್ಲಿರುವ ಹಾಗೂ ಜಾತಿ–ಭಾಷೆಯ ಹೆಸರಲ್ಲಿ ಒಡೆದುಹೋದ ಸಮಾಜವೊಂದು ಹೇಗೆ ತಾನೇ ಒಂದು ಸ್ವಾವಲಂಬಿ ರಾಷ್ಟ್ರವನ್ನು ನಿರ್ಮಿಸಲು ಸಾಧ್ಯ? ಎಂಬ ಪ್ರಶ್ನೆ ಅವರನ್ನು ಕಾಡತೊಡಗಿತು. ಹಾಗಾದರೆ, ಇದಕ್ಕೆ ಪರಿಹಾರವೇನು? ನಮ್ಮೆಲ್ಲ ಭೇದಗಳನ್ನು ಮೀರಿ ನಾವೆಲ್ಲ ಹಿಂದು ಎಂಬ ನೆಲೆಯಲ್ಲಿ ಸಮಾಜವನ್ನು ಸಂಘಟಿಸಬೇಕು. ನಮ್ಮ ಶ್ರೇಷ್ಠ ಪರಂಪರೆ, ಇತಿಹಾಸ, ಧರ್ಮ–ಸಂಸ್ಕೃತಿಗಳ ಬಗ್ಗೆ ನಮ್ಮ ಜನರಲ್ಲಿ ಹೆಮ್ಮೆ ಮೂಡಬೇಕು. ಪ್ರತಿಯೊಬ್ಬನಲ್ಲೂ ಅಚಲ ದೇಶಭಕ್ತಿ ಮೂಡಬೇಕು. 'ದೇಶ ಮೊದಲು' ಎಂಬುದೇ ಸಮಾಜದ ಚಿಂತನೆಯಾಗಬೇಕು. ಆಗ ಮಾತ್ರ ನಮ್ಮ ರಾಷ್ಟ್ರದ ಸರ್ವಾಂಗೀಣ ಉನ್ನತಿ ಸಾಧ್ಯ ಎಂಬುದು ಹೆಡಗೇವಾರರಿಗೆ ಸ್ಪಷ್ಟವಾಯಿತು. ಆದರೆ, ಅದು ಸಾಧ್ಯವಾಗುವುದು ಹೇಗೆ?

**ಸಮಾಜಪರಿವರ್ತನೆಗಾಗಿ ಕೆಲಸ ಮಾಡುವ ಸ್ವಯಂಸೇವಕ:** ನಿಸ್ವಾರ್ಥತೆ ಹಾಗೂ ಪ್ರಾಮಾಣಿಕತೆಯಿಂದ ಕೆಲವರು ಈ ಸಮಾಜಪರಿವರ್ತನೆಯ ಕೆಲಸವನ್ನು ಕೈಗೆತ್ತಿಕೊಳ್ಳದ ಹೊರತು, ಇದು ತಾನಾಗಿಯೇ ಆಗಲಾರದು ಎಂಬುದು ಅವರಿಗೆ ಸ್ಪಷ್ಟವಾಯಿತು. ಅಂತಹ ವ್ಯಕ್ತಿಗಳ ನಿರ್ಮಾಣಕ್ಕಾಗಿ ಸಂಘವನ್ನು ಪ್ರಾರಂಭಿಸಿದರು ಡಾ.ಹೆಡಗೇವಾರ್. ಹೀಗೆ ವ್ಯಕ್ತಿನಿರ್ಮಾಣವನ್ನೇ ಗುರಿಯಾಗಿಟ್ಟುಕೊಂಡು ಸಂಘದ ಶಾಖೆ ಪ್ರಾರಂಭವಾಯಿತು. ಶಾಖೆಯಲ್ಲಿ ಸಿಗುವ ಸಂಸ್ಕಾರದಿಂದಾಗಿ, ಸಂಘಕ್ಕೆ ಬಂದ ಸಮಾನ್ಯ ವ್ಯಕ್ತಿಯೂ ಕೂಡ ಈ ದೇಶವನ್ನು ಪರಮವೈಭವದ ಸ್ಥಿತಿಗೆ ಕೊಂಡೊಯ್ಯಬೇಕು ಎಂಬ ಧ್ಯೇಯವನ್ನು ತನ್ನೆದುರು ಇರಿಸಿಕೊಳ್ಳುತ್ತಾನೆ. ಸ್ವಂತಕ್ಕಾಗಿ ಏನನ್ನೂ ಅಪೇಕ್ಷಿಪಡದೇ, ಪ್ರಸಿದ್ಧಿಯನ್ನು ಬಯಸದೇ, ತನ್ನದೆಲ್ಲವನ್ನೂ ಸಮಾಜಸೇವೆಗೆ ಸಮರ್ಪಿಸಿ ಈ ಗುರಿಯನ್ನು ಸಾಧಿಸುವ ಮಾನಸಿಕತೆ ಅವನಲ್ಲಿ ಮೂಡುತ್ತದೆ. ಒಮ್ಮೆ ಇಂತಹ ವ್ಯಕ್ತಿಗಳ ನಿರ್ಮಾಣವಾದರೆ, ಸಮಾಜವನ್ನು ಸಂಘಟಿಸುವ ಹಾಗೂ ಪರಿವರ್ತನೆ ತರುವ ಕೆಲಸವನ್ನು ಅವರು ಮಾಡುತ್ತಾರೆ ಎಂಬ ಕಲ್ಪನೆ ಡಾ.ಹೆಡಗೇವಾರ್ ಅವರದ್ದಾಗಿತ್ತು. ಅದು ನೂರಕ್ಕೆ ನೂರು ನಿಜ ಎಂಬುದು ಕಳೆದ ನೂರು ವರ್ಷಗಳಲ್ಲಿ ಸಾಬೀತಾಗಿದೆ.

**ಸಂಘದ ಧ್ಯೇಯ–ರಾಷ್ಟ್ರದ ಪರಮವೈಭವ:** ಸಮಾಜದಲ್ಲಿ ಸುಖ, ಶಾಂತಿ, ನೆಮ್ಮದಿ, ಸಹಬಾಳ್ವೆ, ಸಾಮರಸ್ಯ ಇರಬೇಕಾದರೆ ಸಮಾಜವ್ಯವಸ್ಥೆ ಧರ್ಮದ ಆಧಾರದಲ್ಲಿರಬೇಕು ಎಂಬುದು ಭಾರತದ ಚಿಂತನೆ. ಅದು ಹಳಿ ತಪ್ಪಿದಾಗ ಎಲ್ಲವೂ ಅಸ್ತವ್ಯಸ್ತವಾಗುತ್ತದೆ ಎನ್ನುವುದು ಅನುಭವಸಿದ್ಧವಾದ ವಿಚಾರ. ಧರ್ಮದ ಆಧಾರದ ಮೇಲೆ ಸಮಾಜ ನಿರ್ಮಾಣವಾದರೆ ಭಾರತವು ಪರಮವೈಭವ ಸ್ಥಿತಿಯನ್ನು ಸಹಜವಾಗಿಯೇ ತಲುಪುತ್ತದೆ ಎನ್ನುವುದು ಸಂಘದ ಕಲ್ಪನೆ. ಒಂದು ಕಾಲವಿತ್ತು, ಭಾರತ ಇಡೀ ಜಗತ್ತಿಗೆ ಮಾರ್ಗದರ್ಶನ ಮಾಡುವ ಗುರುಸ್ಥಾನದಲ್ಲಿತ್ತು. ಭೌತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಉನ್ನತಿಯನ್ನು ಸಾಧಿಸಿದ್ದ, ಸಂಘರ್ಷರಹಿತವಾದ ಸಮಾಜ ಇಲ್ಲಿತ್ತು. ಈ ಭಾರತೀಯ ಚಿಂತನೆಯನ್ನು ಹಾಗೂ





ಅದನ್ನು ಅನುಷ್ಠಾನಗೊಳಿಸಿದ್ದ ಸಮಾಜವನ್ನು ಅಭ್ಯಾಸ ಮಾಡಲು ವಿದೇಶಗಳಿಂದಲೂ ಇಲ್ಲಿನ ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಥಿಗಳು ಬರುತ್ತಿದ್ದರು ಎಂಬುದನ್ನು ಇತಿಹಾಸ ಹೇಳುತ್ತದೆ. ಅಂತಹ ಉನ್ನತಸ್ಥಿತಿಯಲ್ಲಿದ್ದ ಸಮಾಜ ಇಂದಿನ ಅಧೋಗತಿಗಿಳಿಯಲು ಕಾರಣವೆಂದರೆ, ನಮ್ಮ ಮೇಲೆ ಎರಡು ಸಾವಿರ ವರ್ಷಗಳ ಕಾಲ ನಡೆದ ಪರಕೀಯರ ಧಾಳಿ ಹಾಗೂ ನಮ್ಮ ಮೈಮರೆವು. ಹಾಗಾಗಿ, ಪುನಃ ಸಮಾಜ ಜಾಗೃತಿ ಹಾಗೂ ಸಂಘಟನೆ ಮಾಡಿದರೆ, ಉಳಿದದ್ದೆಲ್ಲವೂ ತಾನಾಗಿಯೇ ಸರಿಯಾಗುತ್ತದೆ. ಏಕೆಂದರೆ, ಇಲ್ಲಿನ ಮೂಲವಿಚಾರದಲ್ಲಿ ಆ ಶಕ್ತಿಯಿದೆ. ಹಾಗಾಗಿ, ನಿರಂತರವಾಗಿ ಈ ಸಮಾಜ ಜಾಗೃತಿ ಹಾಗೂ ಸಂಘಟನೆಯ ಕೆಲಸವನ್ನು ಸಂಘದ ಸ್ವಯಂಸೇವಕರು ಮಾಡುತ್ತಾ ಬಂದಿದ್ದಾರೆ.

**ನೂರು ವರ್ಷದಲ್ಲಿ ಆರೆಸ್ಸೆಸ್ ಏನು ಮಾಡಿದೆ?** ಈ ಹಾದಿಯಲ್ಲಿ ಆರೆಸ್ಸೆಸ್ ನೂರು ವರ್ಷಗಳ ಕಾಲ ನಿರಂತರವಾಗಿ ಕ್ರಮಿಸಿದೆ. ಹೆಚ್ಚು ಕಡಿಮೆ ಮೂರ್ನಾಲ್ಕು ತಲೆಮಾರಿನ ಜನ ಈ ರಾಷ್ಟ್ರಯಜ್ಞದಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಹಾಗಾದರೆ, ತನ್ನ ಗುರಿಯನ್ನು ಸಂಘವು ಸಾಧಿಸಿದೆಯೇ ಎಂದು ಕೇಳಿದರೆ, ಕೆಲವಷ್ಟು ಆಗಿದೆ ಇನ್ನೂ ಆಗಬೇಕಾದ್ದು ಬಹಳ ಇದೆ ಎನ್ನಬಹುದು. ಮೊದಲನೆಯದಾಗಿ, ಹಿಂದು ಎನ್ನಲು ಸಂಕೋಚಪಡುತ್ತಿದ್ದ ಕಾಲ ಹೋಗಿ, ಈಗ ಹಿಂದು ಎನ್ನಲು ಸಮಾಜ ಹೆಮ್ಮೆಪಡುವ ಸ್ಥಿತಿ ನಿರ್ಮಾಣವಾಗಿದೆ. ಹಿಂದು ಸ್ವಾಭಿಮಾನ ಎಲ್ಲೆಡೆ ಕಾಣಸಿಗುತ್ತಿದೆ. ದೇಶ ಧರ್ಮದ ವಿಷಯ ಬಂದಾಗ ರಾಜಿ ಮಾಡಿಕೊಳ್ಳಲು ನಾವು ಸಿದ್ಧರಿಲ್ಲ ಎಂಬುದನ್ನು ನಮ್ಮ ಸಮಾಜ ಯಾವಾಗಲೂ ತೋರಿಸುತ್ತಿದೆ. ಮೊಗಲರ, ಬ್ರಿಟಿಷರ ಆಳ್ವಿಕೆಯ ಪ್ರಭಾವದಿಂದಾಗಿ ಸಮಾಜದಲ್ಲಿದ್ದ ದಾಸ್ಯದ ಮನಃಸ್ಥಿತಿ ಬದಲಾಗಿ, ನಮ್ಮತನದ ಆಧಾರದ ಮೇಲೆಯೇ ಚಿಂತನೆ, ಆಚರಣೆಗಳು ಪ್ರಾರಂಭವಾಗಿವೆ. ಈ ಮಾನಸಿಕತೆಯ ನಿರ್ಮಾಣದಲ್ಲಿ ಸಂಘದ ಪಾತ್ರ ಬಹಳ ದೊಡ್ಡದಿದೆ ಎನ್ನುವುದನ್ನು ಹಲವು ಚಿಂತಕರು, ಸಮಾಜಶಾಸ್ತ್ರಜ್ಞರು ಗುರುತಿಸಿದ್ದಾರೆ. ಎರಡನೆಯದು, ಜಾತಿಭೇದ, ತರತಮಭಾವದಲ್ಲಿ ಮುಳುಗಿದ್ದ ಹಿಂದುಸಮಾಜವನ್ನು ಸಂಘಟಿಸಲು ಬ್ರಹ್ಮ ಬಂದರೂ ಸಾಧ್ಯವಿಲ್ಲ ಎಂಬ ಸ್ಥಿತಿಯನ್ನು ಮೀರಿನಿಂತು ಇಂದು ಹಿಂದುಸಮಾಜ ಸಂಘಟಿತವಾಗುತ್ತಿದೆ ಎನ್ನುವುದೂ ಎಲ್ಲರ ಅನುಭವಕ್ಕೆ ಬಂದಿದೆ. ಬರೀ ನಾವಾಯಿತು, ನಮ್ಮ ಪಾಡಾಯಿತು ಎಂದು ಯೋಚಿಸುವ ಬದಲು, ದೇಶ–ಧರ್ಮಕ್ಕಾಗಿ ಕೆಲಸ ಮಾಡಬೇಕು ಎನ್ನುವ ಉತ್ಸಾಹ ಇಂದು ಎಲ್ಲೆಡೆ ತೋರುತ್ತಿದೆ. ಇಂತಹ ಹಿಂದೂ ಸ್ವಾಭಿಮಾನ, ರಾಷ್ಟ್ರಾಭಿಮಾನದ ಜಾಗೃತಿಯ ಪರಿಣಾಮವಾಗಿ ರಾಜಕೀಯ, ಉದ್ಯಮ, ಶಿಕ್ಷಣ, ಕೃಷಿ, ಕಲೆ ಮೊದಲಾದ ಎಲ್ಲ ಕ್ಷೇತ್ರಗಳಲ್ಲಿಯೂ ಭಾರತೀಯ ಚಿಂತನೆಯ ಆಧಾರದಲ್ಲಿ ಕೆಲಸ ನಡೆಯುತ್ತಿದೆ. ಹೀಗೆ, ಭಾರತ ತನ್ನತನವನ್ನು ಪುನಃ ಗಳಿಸಿಕೊಳ್ಳುವತ್ತ, ನಿಜ ಅರ್ಥದಲ್ಲಿ ಸ್ವಾತಂತ್ರ್ಯ ಗಳಿಸುವತ್ತ ಹೆಜ್ಜೆಯಿಡುತ್ತಿರುವುದನ್ನು, ಹಿಂದುಸಮಾಜ ಮತ್ತೆ ಪುಟಿದೇಳುತ್ತಿರುವುದನ್ನು ಇಡೀ ವಿಶ್ವವೇ ನಿಬ್ಬೆರಗಾಗಿ ನೋಡುತ್ತಿದೆ. ಹಿಂದೆಂದೂ ಇಲ್ಲದಷ್ಟು ಗೌರವ, ಮನ್ನಣೆಗಳು ಇಂದು ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ದೊರಕುತ್ತಿವೆ. ಇವೆಲ್ಲದರ ಹಿಂದೆ ಸಂಘವೊಂದೇ ಕೆಲಸ ಮಾಡಿದೆ ಎಂದಲ್ಲದಿದ್ದರೂ, ಸಂಘದ ಸ್ವಯಂಸೇವಕರ ಶತಮಾನದ ಶ್ರಮವಿದೆ ಎಂಬುದನ್ನು ಖಂಡಿತಾ ಗುರುತಿಸಬಹುದು.

1947ರ ದೇಶವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನ ಹಾಗೂ ಭಾರತದಲ್ಲಿನ ಹಿಂದುಗಳ ರಕ್ಷಣೆ, ಗೋವಾ, ಹೈದರಾಬಾದ್ ಮುಕ್ತಿಸಂಗ್ರಾಮ, 1962ರ ಚೀನಾ ಯುದ್ಧದ ಸಂದರ್ಭದಲ್ಲಿ ಸೈನ್ಯದೊಂದಿಗೆ ಸಹಕಾರ, ಕನ್ಯಾಕುಮಾರಿಯ ವಿವೇಕಾನಂದ ಸ್ಮಾರಕ ನಿರ್ಮಾಣ, 1975ರ ತುರ್ತುಪರಿಸ್ಥಿತಿ ಹೇರಿಕೆಯಾದಾಗ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಆಂದೋಲನ, ಅಯೋಧ್ಯೆಯ ಶ್ರೀರಾಮ ಜನ್ಮಭೂಮಿಯಲ್ಲಿ ಮಂದಿರ ನಿರ್ಮಾಣಕ್ಕಾಗಿ ದೇಶವ್ಯಾಪಿ ಆಂದೋಲನ, ರಾಮಸೇತು ರಕ್ಷಣೆಗಾಗಿ ಹೋರಾಟ, ಪ್ರವಾಹ, ಬರ, ಭೂಕಂಪ, ಅಪಘಾತದ ಸಂದರ್ಭಗಳಲ್ಲಿ ತುರ್ತು ಪರಿಹಾರ ಕಾರ್ಯಾಚರಣೆಯಿರಬಹುದು – ಎಲ್ಲ ಸಂದರ್ಭಗಳಲ್ಲಿ ಸಂಘ ಯಾವಾಗಲೂ ಸಮಾಜದ ತುರ್ತು ಅಗತ್ಯಕ್ಕೆ ಸ್ಪಂದಿಸಿದೆ, ನೇತೃತ್ವ ವಹಿಸಿದೆ, ಸಮಾಜದ ಜತೆ ನಿಂತಿದೆ. ಅಲ್ಲದೇ, ದೇಶದೆಲ್ಲೆಡೆ 1.5 ಲಕ್ಷಕ್ಕೂ ಹೆಚ್ಚು ಸೇವಾ ಪ್ರಕಲ್ಪಗಳನ್ನು ಸಂಘ ಹಾಗೂ ಸಂಘಪ್ರೇರಿತ ಸಂಘಟನೆಗಳು ನಡೆಸುತ್ತಿವೆ. ಸಾವಿರಾರು ಶಾಲೆಗಳನ್ನು ನಡೆಸುತ್ತಿವೆ. ಸ್ವಸಹಾಯ ಸಂಘಗಳೂ, ಆಸ್ಪತ್ರೆಗಳೂ, ಅನಾಥಾಲಯಗಳೂ, ವನವಾಸಿ ವಿದ್ಯಾರ್ಥಿನಿಲಯಗಳು – ಹೀಗೆ ಸಮಾಜದ ಅಗತ್ಯಕ್ಕೆ ತಕ್ಕಂತೆ ಹೊಸ ಹೊಸ ಚಟುವಟಿಕೆಗಳನ್ನು ಪ್ರಾರಂಭಿಸುತ್ತಲೇ ಇದೆ.

**ಸಮಾಜವೇ ಸಂಘವಾಗಲಿ ಎಂಬುದೇ ಸಂಘದ ಆಶಯ:** ಹೀಗೆ ಸಂಘ ಇಂದು ಒಂದು ಸಂಘಟನೆಯಾಗಿ ಮಾತ್ರ ಉಳಿದಿಲ್ಲ. ಒಂದು ಆಂದೋಲನವಾಗಿಯೇ ಬೆಳೆದಿದೆ. ಇಡೀ ಭಾರತೀಯ ಸಮಾಜ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಇದರಲ್ಲಿ ಭಾಗಿಯಾಗುತ್ತಿದೆ. ಅನೇಕ ಸಾಮಾಜಿಕ ನಾಯಕರು, ಸಂಘ ಸಂಸ್ಥೆಗಳು ಇದರಲ್ಲಿ ಭಾಗಿಯಾಗಿವೆ. ಭಾರತದ ಪುನರುತ್ಥಾನದಲ್ಲಿ ತಮ್ಮದೇ ನೆಲೆಯಲ್ಲಿ ಸಕ್ರಿಯ ಪಾತ್ರವಹಿಸುತ್ತಿವೆ. ಸಂಘವೆನ್ನುವುದು ಸಮಾಜದಲ್ಲಿ ಒಂದು ಸಂಘಟನೆಯಾಗಬಾರದು, ಬದಲಾಗಿ ಸಂಪೂರ್ಣ ಸಮಾಜದ ಸಂಘಟನೆಯಾಗಬೇಕೆನ್ನುವುದು ಸಂಘಸ್ಥಾಪಕರಾದ ಡಾ. ಹಡಗೇವಾರರ ಕಲ್ಪನೆಯಾಗಿತ್ತು. ಇಂದು ಸಂಘ ಆ ಹಾದಿಯಲ್ಲಿಯೇ ಮುನ್ನಡೆಯುತ್ತಿದೆ. ಸಮಾಜದ ಸಂಘಟನೆಯಾಗುತ್ತಿರುವ ಲಕ್ಷಣಗಳು ಕಾಣಿಸುತ್ತಿವೆ.

ಸಂಘದ ಸಿದ್ಧಾಂತ ಅಥವಾ ಫಿಲಾಸಫಿ ಏನು ಎಂದು ಹಲವರು ಕೇಳುತ್ತಾರೆ. ಸಂಘವು ತನ್ನದೇ ಹೊಸ ಸಿದ್ಧಾಂತವನ್ನೇನೂ ಹುಟ್ಟುಹಾಕಿಲ್ಲ. ಹಿಂದು ಚಿಂತನೆಯೇ ಸಂಘದ ಚಿಂತನೆ, ಸಿದ್ಧಾಂತ ಎಂದೇ ಸಂಘದ ಕಾರ್ಯಕರ್ತರು ಉತ್ತರಿಸುತ್ತಾರೆ. ಹಿಂದುಧರ್ಮದ ಸಂಕೇತವಾಗಿ ಅನಾದಿಕಾಲದಿಂದಲೂ ಗೌರವಿಸಲ್ಪಡುತ್ತಿರುವ ಭಗವಾಧ್ವಜವೇ ಸಂಘದ ಸ್ವಯಂಸೇವಕರಿಗೆ ಗುರು! ಯಾವುದನ್ನು ಶ್ರೀರಾಮ–ಶ್ರೀಕೃಷ್ಣ, ಬುದ್ಧ–ಮಹಾವೀರ–ಗುರುನಾನಕರು, ಶಂಕರ–ರಾಮಾನುಜರು, ರಾಮಕೃಷ್ಣ–ವಿವೇಕಾನಂದರು, ಕಬೀರ–ಬಸವ, ಶಿವಾಜಿ–ರಾಣಾಪ್ರತಾಪ–ಕೃಷ್ಣದೇವರಾಯ ಮೊದಲಾದವರು ಮಾಡಿದರೋ ಅದೇ ಕೆಲಸದ ಮುಂದುವರೆದ ಭಾಗವಾಗಿ ಸಂಘ ತನ್ನನ್ನು ತಾನು ಈ ರಾಷ್ಟ್ರಸೇವೆಯಲ್ಲಿ ತೊಡಗಿಸಿಕೊಂಡಿದೆ. ಇದು ದೇವರ ಕೆಲಸ, ಇದಕ್ಕಾಗಿ ತಾನು ಕಟಿಬದ್ಧ ಎಂದೇ ಸಂಘದ ಸ್ವಯಂಸೇವಕ ಪ್ರತಿನಿತ್ಯದ ಪ್ರಾರ್ಥನೆಯಲ್ಲಿ ಹೇಳುತ್ತಾನೆ. ಕಷ್ಟಕರವಾದ ಈ ಮಾರ್ಗವನ್ನು ಸ್ವ–ಇಚ್ಛೆಯಿಂದಲೇ ಆರಿಸಿಕೊಂಡಿರುವ ಸ್ವಯಂಸೇವಕ, ಈ ಕೆಲಸದ ನಡುವೆ ಬರುವ ಅಡ್ಡಿಆತಂಕಗಳನ್ನು ಯಶಸ್ವಿಯಾಗಿ ನಿವಾರಿಸಿಕೊಂಡು ರಾಷ್ಟ್ರದ ಪರಮವೈಭವವನ್ನು ಸಾಧಿಸಲು ಅನುಗ್ರಹಿಸು ಎಂದು ಭಗವಂತನಲ್ಲಿ ಬೇಡುತ್ತಾನೆ. ತನ್ನನ್ನು ಯಾರೇ ವಿರೋಧಿಸಲಿ, ತಾನು ಮಾತ್ರ ಯಾರನ್ನೂ ವಿರೋಧಿಸುವವನಲ್ಲ. ಯಾರ ಬಗ್ಗೆಯೂ ದ್ವೇಷಭಾವನೆಯಿಲ್ಲ. ಎಲ್ಲರ ಬಗ್ಗೆ ಪ್ರೇಮ, ಸ್ನೇಹಭಾವನೆಯೇ ಸ್ವಯಂಸೇವಕನ ಸಹಜಗುಣ. ಅದೇ ಅವನ ಶಕ್ತಿ.

ಸಂಘ ಏನನ್ನೂ ಮಾಡುವುದಿಲ್ಲ, ಸ್ವಯಂಸೇವಕ ಎಲ್ಲವನ್ನೂ ಮಾಡುತ್ತಾನೆ ಎಂದು ಡಾ.ಹೆಡಗೇವಾರ್ ಹೇಳುತ್ತಿದ್ದರಂತೆ. ಹಾಗೆ, ಇಂದು ಸಂಘದ ಸ್ವಯಂಸೇವಕರು ಎಲ್ಲೇ ಇರಲಿ, 'ದೇಶ ಮೊದಲು, ಧರ್ಮ ಮೊದಲು' ಎಂಬುದೇ ಅವರ ಚಿಂತನೆ. ಅದಕ್ಕನುಗುಣವಾಗಿಯೇ ಅವರು ಕಾರ್ಯಪ್ರವೃತ್ತರಾಗುತ್ತಿದ್ದಾರೆ. ಈ ಚಿಂತನೆ ಸಮಾಜದೆಲ್ಲೆಡೆ ಪಸರಿಸಲಿ, ಸಮಾಜವೇ ಸಂಘವಾಗಲಿ, ಸಂಘ ಸಮಾಜದಲ್ಲಿ ಲೀನವಾಗಲಿ ಎಂಬುದೇ ಪ್ರತಿಯೊಬ್ಬ ಸ್ವಯಂಸೇವಕನ ಆಶಯ.

## ಸಂಸ್ಮರಣೆ

# ಭಕ್ತಿಭಂಡಾರಿ ಬಸವಣ್ಣ!



ಹಿಂದೂ ದರ್ಶನದಲ್ಲಿ ಶಾಸ್ತ್ರಕಾರರು ಶಿವನ ಅನುಗ್ರಹ ಪಡೆಯಲು ಅನೇಕ ಮಾರ್ಗಗಳನ್ನು ಅವಲಂಬಿಸಿದ್ದು, ಅವುಗಳಲ್ಲಿ ಭಕ್ತಿ ಮಾರ್ಗ ಶ್ರೇಷ್ಠ. ಪಂಡಿತ ಪಾಮರರೆಲ್ಲ ಈ ಮಾರ್ಗವನ್ನು ಸುಲಭವಾಗಿ ಅನುಸರಿಸಬಹುದು. ಈ ಭಕ್ತಿಯ ಶ್ರೇಷ್ಠತೆಯನ್ನು ನಾರದೀಯ ಸೂತ್ರ, ಭಗವದ್ಗೀತೆ, ಶಿವರಹಸ್ಯ ಮೊದಲಾದ ಗ್ರಂಥಗಳಲ್ಲಿ ಬಹಳ ಸ್ವಾರಸ್ಯಕರವಾಗಿ ವರ್ಣಿಸಿದ್ದು, ಶಿವಶರಣರೂ ತಮ್ಮ ವಚನಗಳಲ್ಲಿ ಪರಿಪರಿಯಾಗಿ ವಿವರಿಸಿದ್ದಾರೆ. ಹೀಗೆ ಭಕ್ತಿಯ ಮಾರ್ಗವನ್ನು ಪ್ರಚಾರಮಾಡಿದವರಲ್ಲಿ ಬಸವಣ್ಣನವರು ಪ್ರಮುಖರು. ಅವರ ಕಾರ್ಯಗಳಲ್ಲಿ ಭಕ್ತಿಯೇ ಪ್ರಧಾನ, ಆದ್ದರಿಂದಲೇ ಅವರು ಭಕ್ತಿ ಭಂಡಾರಿ ಎಂದು ಜನಮಾನಸದಲ್ಲಿ ಗುರುತಿಸಿಕೊಂಡಿದ್ದಾರೆ.

ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದರೆ ರುಚಿಯುಂಟೆ? ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ ಮಾಡದೆ ಅಕ್ಕಟಾ! ಸಂಸಾರ ವೃಥಾ ಹೋಯಿತ್ತಲ್ಲಾ! ಅದೇತರ ಭಕ್ತಿ? ಅದೇತರ ಯುಕ್ತಿ? ಕೂಡಿಕೋ, ಕೂಡಲಸಂಗಮದೇವಾ. ಎನ್ನುವಲ್ಲಿಗೆ ಸಿಹಿಯ ಸವಿ ಸೇವಿಸದ ಹೊರತು ತಿಳಿಯದು, ಅಲೌಕಿಕವು ಅನುಭವಿಸದೇ ಅರಿವಿಗೆ ಬಾರದು. ಭಕ್ತಿ ಮಾಡಿ, ಭಗವಂತನಲ್ಲಿ ಒಂದಾಗುವಂತೆ ಕರೆ ನೀಡಿದ್ದಾರೆ.

"ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ: ನಾನು ಮತ್ತಾವ ಪದವಿಯನೊಲ್ಲೆನಯ್ಯಾ! ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ" ಎಂದ ಬಸವಣ್ಣನವರ ಭಕ್ತಿಯ ಉತ್ಕಟತೆ ಎಷ್ಟಿತ್ತೆಂದರೆ, ಸ್ವತಃ ಮಂತ್ರಿಯಾಗಿದ್ದ ಬಸವಣ್ಣ ಎಲ್ಲವನ್ನೂ ತೊರೆದು, ಕೇವಲ ಭಗವಂತನಲ್ಲಿ ತಮ್ಮ ಮನವನ್ನು ಸ್ಥಿರವಾಗಿಸಿದವರ ಪಾದದ ಸಾಂಗತ್ಯ ಸಾಕೆಂದು ನುಡಿದರು. ಬರೀ ನುಡಿದದ್ದಲ್ಲ, ಹಾಗೆ ಬದುಕಿದ್ದಾರೆ ಕೂಡಾ. ಎಲ್ಲ ಸುಖಭೋಗಗಳನ್ನು ಅನುಭವಿಸಬಹುದಾದ ಸ್ಥಾನದಲ್ಲಿದ್ದರೂ ಯಾವುದಕ್ಕೂ ಅಂಟಿಕೊಳ್ಳದವರು. ಸಂಸಾರಿಯಾಗಿದ್ದರೂ ಸಂನ್ಯಾಸಿಯಂತೆ ಕೊಳೆ ಅಂಟಿಸಿಕೊಳ್ಳದೇ, ಭವದ ಭಾರ ನೂಕಿದವರು. ಬಸವಣ್ಣನವರು ಯಾವ ಕಾರ್ಯವನ್ನು ಮಾಡಿದರೂ ಭಕ್ತಿಯಿಂದಲೇ ಮಾಡಿರುತ್ತಾರೆ. ಅವರ ವಚನಗಳನ್ನು ನೋಡಿದರೆ ಈ ಮಾತು ಸ್ಪಷ್ಟವಾಗಿ ತೋರುತ್ತದೆ. ಕೂಡಲಸಂಗನ ಭಕ್ತಿಯಿಲ್ಲದೆ ಅವರ ಯಾವ ವ್ಯವಹಾರವೂ ಇರುವುದಿಲ್ಲ ಎಂದು ಬಸವಣ್ಣನವರ ಭಕ್ತಿಯ ಪ್ರಭಾವಾತಿಶಯವನ್ನು ಅವರ ಕಾಲದ ಶರಣರೂ, ವೀರಶೈವ ಕವಿಗಳೂ ಪರಿಪರಿಯಾಗಿ ಕೊಂಡಾಡಿದ್ದಾರೆ.

ಇಂಥ ಬಸವಣ್ಣನವರ ಭಕ್ತಿ ಪರಾಕಾಷ್ಠೆಯ ಬಗ್ಗೆ, ಅಗಣಿತ ವ್ಯಕ್ತಿತ್ವದ ಬಗ್ಗೆ ಅಕ್ಕ ನಾಗಲಾಂಬಿಕೆ, "ಮರ್ತ್ಯಲೋಕದಲ್ಲಿ ಆ ಸದಾಚಾರದ ಬೆಳವಿಗೆಯ ಮಾಡಲೆಂದು ಬಸವಣ್ಣ ಬಂದು ಭಕ್ತಿಸ್ಥಲವ ಹರಹಿದ. ಗುರು ಲಿಂಗ ಜಂಗಮ ದಾಸೋಹ ಪಾದೋದಕ ಪ್ರಸಾದದ ಹಾದಿಯನೆಲ್ಲರಿಗೆ ತೋರಿದ ಎಂದೂ, ಹೀಗಾಗಿ ಬಸವಣ್ಣ ಎಂದಿಗೂ ಕ್ಷೀಣಿಸದ ಭಕ್ತಿಯ ತವನಿಧಿ ಎಂದೂ ಬಣ್ಣಿಸಿದ್ದಾಳೆ. "ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ ಭಕ್ತಿಯ ಬೆಳವಿಗೆ ದೆಸೆದೆಸೆಗಲ್ಲಾ ಪಸರಿಸಿತ್ತಲ್ಲಾ! ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು? ಅಣ್ಣಾ, ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದೊಡೆ, ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ" ಎಂದು ಬಸವಣ್ಣನೊಡನೆ ಭಕ್ತಿ ಬಂದಿತ್ತು, ಅವನಿಂದ ಜಗದೆಲ್ಲೆಡೆ ಪಸರಿಸಿತ್ತು, ಅವನು ಹೊರಟೊಡನೆ ಭಕ್ತಿಯೂ ಹೊರಟು ಹೋಗಿತ್ತು ಎಂದು ನುಡಿದಿದ್ದಾಳೆ. ಭಕ್ತಿ ಬಿತ್ತಿ ಬೆಳೆಯಲೆಂದೇ ಅವರು ಮರ್ತ್ಯಕ್ಕೆ ಬಂದಿದ್ದರೆಂದೂ, ಭಕ್ತಿಯಲ್ಲದೇ ಇನ್ನೇನನ್ನೂ ಮಾಡಲಿಲ್ಲವೆಂದು, ಉಳಿದೆಲ್ಲವೂ ಭಕ್ತಿಯ ಪ್ರಸರಣಕ್ಕೆ ಮಾಡಿದ ಮಹತ್ಕಾರ್ಯಗಳೆಂದೂ ಅಕ್ಕ ಹೇಳಿದ್ದಾಳೆ.

ಸರಸಕವಿಸಾರ್ವಭೌಮನೂ, ವೀರಶೈವರ ಆದ್ಯಕವಿಯೂ ಆದ ಹರೀಶ್ವರನು 'ಸದ್ಭಕ್ತಿ ಸೂರೆಗಾರಂ', 'ಭಕ್ತ ಕುಲತಿಲಕಂ' ಎಂದು ತನ್ನ ಬಸವರಾಜದೇವರ ರಗಳೆಯಲ್ಲಿ ಹೇಳಿದ್ದಾನೆ. ಶರಣರು ಬಸವಣ್ಣನವರ ಮನೆಯಲ್ಲಿ ಲಿಂಗಾರ್ಚನೆಯನ್ನು ಮಾಡುವ ಕಾಲದಲ್ಲಿ ತಮತಮಗೆ ಬೇಕಾದ ಪದಾರ್ಥಗಳನ್ನು ಬೇಡಿದರೂ "ಇಲ್ಲೆನ್ನದಚಳ" ಭಕ್ತಿ ಸಾಮ್ರಾಜ್ಯ ಚಕ್ರವರ್ತಿಯಾದ ಬಸವಣ್ಣ ಎಂದು ಸಂಬೋಧಿಸಿದ್ದಾನೆ. ಬಸವಣ್ಣನವರು ಆಚರಿಸುತ್ತಿದ್ದ ಭಕ್ತಿಯನ್ನು ಶಿಂಗಿರಾಜ ಪುರಾಣ ವಿಜಯದಲ್ಲಿ "ದಾಸೋಹಕ್ಕೆ ಕಲ್ಪವೃಕ್ಷ, ಶರಣರು ಕಾಮಿಸಿದ್ದನ್ನು ಕೊಡುವುದಕ್ಕೆ ಕಾಮಧೇನು, ಶರಣರು ಚಿಂತಿಸಿದ್ದನ್ನು ಕೊಡುವುದಕ್ಕೆ ಚಿಂತಾರತ್ನವು, ಜಗತ್ತಿನ ಅಶುದ್ಧವನ್ನು ಶುದ್ಧ ಮಾಡುವದಕ್ಕೆ ಸಿದ್ಧರಸ, ಪುರುಷಾಕಾರವನ್ನು ಹೊಂದಿದ ಪರುಷವು" ಎಂದು ಬಣ್ಣಿಸಿದ್ದಾನೆ.

ಈ ಕಾಲಕ್ಕೆ ಬಸವಣ್ಣನವರನ್ನು ಕ್ರಾಂತಿಕಾರಿ ಎಂದು ಅನೇಕರು ಹೇಳುವುದುಂಟು. ಆದರೆ, ಬಸವಣ್ಣನೊಬ್ಬ ಭಕ್ತಿಭಂಡಾರಿ, ಜಗತ್ತಿಗೆ ಭಕ್ತಿಯ ಬೆಳಕನ್ನು ಬೀರಿದ ಮಹಾಯೋಗಿ, ವಿಶ್ವದೆಲ್ಲೆಡೆ ಶಿವತ್ವವನ್ನು ಪಸರಿಸಿದ ಪ್ರಚಾರಕ, ಭಗವಂತನಲ್ಲಿ ಶ್ರದ್ಧೆ ಜಾಗೃತಗೊಳಿಸಿದ ವಿಶ್ವಗುರು, ಜಗಕೆ ಕಾಯಕದ ಮಹತ್ವವನ್ನು, ಮುಕ್ತಿಯ ತತ್ವವನ್ನು, ಆಧ್ಯಾತ್ಮದ ಸತ್ವವನ್ನು ತೋರಿದ ಜಗಜ್ಯೋತಿ. ಬಸವಣ್ಣನ ಭಕ್ತಿ ನಮಗೆಲ್ಲ ಜೀವನ್ಮುಕ್ತಿಯ ಮಾರ್ಗವಾಗಲಿ.

# ಮಹಾರಾಣಿ ಅಬ್ಬಕ್ಕನವರ 500ನೇ ಜಯಂತಿಯ ಸಂದರ್ಭದಲ್ಲಿ ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆಯವರ ಹೇಳಿಕೆ




ಉಳ್ಳಾಲದ ಮಹಾರಾಣಿ ಅಬ್ಬಕ್ಕ ಅವರು ಭಾರತದ ಮಹಾನ್ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದರು. ಅವರು ಆಡಳಿತದಲ್ಲಿ ನಿಪುಣರಾಗಿದ್ದರು, ಅಜೇಯ ತಂತ್ರಗಾರರಾಗಿದ್ದರು ಮತ್ತು ಅತ್ಯಂತ ಶೂರ ಆಡಳಿತಗಾರರಾಗಿದ್ದರು. ಅಬ್ಬಕ್ಕ ಅವರು ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಸಂಸ್ಥಾನವನ್ನು (ಪ್ರಸ್ತುತ ಕರಾವಳಿ ಕರ್ನಾಟಕ) ಯಶಸ್ವಿಯಾಗಿ ಆಳಿದವರು. ವೀರ ಮಹಾರಾಣಿ ಅಬ್ಬಕ್ಕರ 500ನೇ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ಅವರ ಅವಿನಾಶಿ ಪರಂಪರೆಗೆ ಗೌರವ ಸಲ್ಲಿಸುತ್ತಾ ಪೂರ್ಣ ಹೃದಯದಿಂದ ನಮನ ಸಲ್ಲಿಸುತ್ತದೆ.

ಅವರ ಆಳ್ವಿಕೆಯ ಸಮಯದಲ್ಲಿ, ವಿಶ್ವದ ಅತ್ಯಂತ ಅಜೇಯ ಸೈನ್ಯಶಕ್ತಿ ಎಂದು ಪರಿಗಣಿಸಲಾಗಿದ್ದ ಪೋರ್ಚುಗೀಸ್ ಆಕ್ರಮಣಕಾರರನ್ನು ಪದೇ ಪದೇ ಸೋಲಿಸಿದರು. ಈ ಮೂಲಕ ಅವರು ತಮ್ಮ ರಾಜ್ಯದ ಸ್ವಾತಂತ್ರ್ಯವನ್ನು ಕಾಪಾಡಿದರು. ಉತ್ತರ ಕೇರಳದ ಸಾಮೂತಿರಿ (ಜಮೋರಿನ್) ರಾಜನೊಂದಿಗಿನ ಅವರ ರಾಜತಾಂತ್ರಿಕ ಮತ್ತು ಕಾರ್ಯತಂತ್ರದ ಚತುರ ಮೈತ್ರಿಗಳು ಈ ಸಾಧನೆಯನ್ನು ಸಾಧ್ಯವಾಗಿಸಿದವು. ಅಬ್ಬಕ್ಕ ಅವರ ತಂತ್ರ, ಶೌರ್ಯ ಮತ್ತು ನಿರ್ಭೀತ ನಾಯಕತ್ವವು ಅವರನ್ನು ಇತಿಹಾಸದ ಪುಟಗಳಲ್ಲಿ "ಅಭಯರಾಣಿ" (ನಿರ್ಭೀತ ರಾಣಿ) ಎಂಬ ಗೌರವಾನ್ವಿತ ಬಿರುದಿಗೆ ಪಾತ್ರರಾಗಿಸಿತು.

ಮಹಾರಾಣಿ ಅಬ್ಬಕ್ಕ ಅವರು ಭಾರತದ ಎಲ್ಲರನ್ನೂ ಒಳಗೊಳ್ಳುವ ಸಂಪ್ರದಾಯವನ್ನು ಮಾದರಿಯಾಗಿ ತೋರಿಸಿದವರು. ಅವರು ಹಲವಾರು ಶಿವ ದೇವಾಲಯಗಳು ಮತ್ತು ಯಾತ್ರಾ ಸ್ಥಳಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಿದರು. ಅವರ ಆಳ್ವಿಕೆಯಲ್ಲಿ, ಎಲ್ಲಾ ಸಂಪ್ರದಾಯಗಳ ಹಾಗೂ ಸಮುದಾಯಗಳನ್ನೂ ಸಮಾನ ಗೌರವದಿಂದ ಕಾಣಲಾಗಿತ್ತು ಮತ್ತು ಸಮಾಜದ ವಿವಿಧ ವರ್ಗಗಳಲ್ಲಿ ಸಮಗ್ರ ಅಭಿವೃದ್ಧಿಯನ್ನು ಪೋಷಿಸಿದರು. ಈ ಗೌರವ ಮತ್ತು ಏಕತೆಯ ಪರಂಪರೆ ಕರ್ನಾಟಕದಲ್ಲಿ ಇಂದಿಗೂ ಮುಂದುವರಿದಿದೆ. ಅವರ ಪ್ರೇರಣಾದಾಯಕ ಕಥೆಗಳು ಯಕ್ಷಗಾನ, ಜಾನಪದ ಗೀತೆಗಳು ಮತ್ತು ಸಾಂಪ್ರದಾಯಿಕ ನೃತ್ಯಗಳ ಮೂಲಕ ಜೀವಂತವಾಗಿವೆ.

ಅವರ ಅಪ್ರತಿಮ ಶೌರ್ಯ, ರಾಷ್ಟ್ರ ಮತ್ತು ಧರ್ಮದ ಕುರಿತಾದ ಸಮರ್ಪಣೆ, ಪರಿಣಾಮಕಾರಿ ಆಡಳಿತವನ್ನು ಗೌರವಿಸಿ ಭಾರತ ಸರ್ಕಾರವು ಅವರ ಸ್ಮರಣಾರ್ಥ 2003ರಲ್ಲಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡುವ ಮೂಲಕ ಅವರ ಶೌರ್ಯದ ಕಥೆಗಳನ್ನು ರಾಷ್ಟ್ರದೊಂದಿಗೆ ಹಂಚಿಕೊಂಡಿತು. ಹಾಗೆಯೇ 2009ರಲ್ಲಿ ರಾಷ್ಟ್ರದ ಒಂದು ಗಸ್ತು ಹಡಗಿಗೆ ರಾಣಿ ಅಬ್ಬಕ್ಕ ಅವರ ಹೆಸರಿಡಲಾಗಿದ್ದು, ಇದು ಅವರ ನೌಕಾಪಡೆಯ ಪರಂಪರೆಯಿಂದ ಪ್ರೇರಣೆ ಪಡೆದು ಸ್ಫೂರ್ತಿಯ ದಾರಿದೀಪವಾಗಿ ಕಾರ್ಯನಿರ್ವಹಿಸುತ್ತಿದೆ.

ಮಹಾರಾಣಿ ಅಬ್ಬಕ್ಕ ಅವರ ಜೀವನವು ಇಡೀ ರಾಷ್ಟ್ರಕ್ಕೆ ಸ್ಫೂರ್ತಿಯಾಗಿದೆ. ಅವರ 500ನೇ ಜಯಂತಿಯ ಸಂದರ್ಭದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘವು ಈ ಅನುಕರಣೀಯ ವ್ಯಕ್ತಿತ್ವಕ್ಕೆ ಗೌರವ ಸಲ್ಲಿಸುತ್ತದೆ ಮತ್ತು ಅವರ ಅದ್ಭುತ ಜೀವನದಿಂದ ಸ್ಫೂರ್ತಿ ಪಡೆದು ರಾಷ್ಟ್ರ ನಿರ್ಮಾಣದ ಧ್ಯೇಯಕ್ಕೆ ಸಕ್ರಿಯವಾಗಿ ಕೊಡುಗೆ ನೀಡಬೇಕೆಂದು ಇಡೀ ಸಮಾಜಕ್ಕೆ ಕರೆ ನೀಡುತ್ತದೆ.

# ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತಿರುವ ಸ್ವಸಹಾಯ ಸಂಘ

20 ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ಹಿಂದುಳಿದ ವನವಾಸಿ ಗ್ರಾಮಸ್ಥರ ಹಕ್ಕು ಸ್ಥಾಪನೆಗೋಸ್ಕರ ಸೇವಾಭಾರತಿಯು "ಶ್ರೀ ಮಧುರಮ್ಮನ್" ಸ್ವಸಹಾಯ ಸಂಘಗವನ್ನು ಪ್ರಾರಂಭಿಸಿತು. ಇದೀಗ ತಮಿಳುನಾಡಿನ ಉದ್ದಗಲಕ್ಕೂ ಸೇವಾಭಾರತಿಯ ವತಿಯಿಂದ ನಡೆಯುತ್ತಿರುವ ಈ ಸಂಘಗಳ ಸಂಖ್ಯೆ 4000ಕ್ಕೂ ಅಧಿಕವಾಗಿದೆ. ಈ ಸಂಘವು ಆರ್ಥಿಕ ಸಬಲೀಕರಣದ ಜೊತೆಗೆ ಸಮಾಜದಲ್ಲಿ ಪರಸ್ಪರ ಸಹಾಯ ನೀಡುವ ಮನಸ್ಥಿತಿಯನ್ನೂ ಉದ್ದೀಪನಗೊಳಿಸುತ್ತದೆ.

ಅಂಚುಕಂದರಾಯಿ ಗ್ರಾಮದ ರಾಜುವಿಗೆ ಹೃದಯಾಘಾತವಾಗಿ, ತಕ್ಷಣ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಬಿದ್ದಾಗ, ಆತನ ಮಗಳಿಗೆ ಸ್ವಸಹಾಯ ಸಂಘಗಳ 10 ಸದಸ್ಯೆಯರು ಸೇರಿ ಧನಸಹಾಯ ನೀಡಿದ್ದರು. ಥಾಡೀಕ್ಕರಂಕೋನಾಮ್ ಗ್ರಾಮದಲ್ಲಿ ಒಬ್ಬ ವಿಧವೆಯ ಮನೆಯು ಬೆಂಕಿಗೆ ಆಹುತಿಯಾಗಿದ್ದಾಗ ಸ್ವಸಹಾಯ ಗುಂಪಿನ ಎಲ್ಲರೂ ಸೇರಿ ಸಂಸಾರಕ್ಕೆ ಬೇಕಾದ ಅವಶ್ಯಕ ಸಾಮಗ್ರಿಗಳನ್ನು ಸಂಗ್ರಹಿಸಿ ಮಹಿಳೆಗೆ ಒಂದು ಒಳ್ಳೆಯ ಮನೆಯನ್ನೂ ನಿರ್ಮಿಸಿಕೊಟ್ಟಿದ್ದರು. ತಮಿಳುನಾಡಿನಲ್ಲಿ ಕನ್ಯಾಕುಮಾರಿ ಜಿಲ್ಲೆಯ ಥಿರಪರಪ್ಪೂ ಗ್ರಾಮದಲ್ಲಿ ಪಂಚಾಯ್ತಿಯಿಂದ ಜಾತಿಯ ಬಗ್ಗೆ ಭಿನ್ನಾಭಿಪ್ರಾಯ ಬಂದರೂ, ಸಂಘದ ಸದಸ್ಯೆಯರು ಧೃತಿಗೆಡಲಿಲ್ಲ. ಪಂಚಾಯ್ತಿಯಿಂದ



ಗುಂಪಿನಲ್ಲಿರುವ ಹಿಂದುಳಿದ ಜಾತಿಯ ಮಹಿಳೆಯರನ್ನು ಹೊರಹಾಕಬೇಕೆಂದು ಫರ್ಮಾನು ಹೊರಡಿಸಿದಾಗ, ಈ ಮಹಿಳೆಯರು ಆ ತುಘಲಕ್ ಆದೇಶವನ್ನು ಪಾಲಿಸಲು ನಿರಾಕರಿಸಿಬಿಟ್ಟರು.

ವನವಾಸಿ ಕ್ಷೇತ್ರಗಳಲ್ಲಿರುವ ಸಾಹುಕಾರರ ಶೋಷಣೆ ಅಥವಾ ಜಾತಿ ಭೇದಭಾವದ ವಿರುದ್ಧ ಧ್ವನಿಯನ್ನು ಎತ್ತುವ ಈ ಸ್ವಸಹಾಯ ಸಂಘಗಳು ಮದ್ಯ ಮಾರಾಟದ ವಿರುದ್ಧವೂ ಹೋರಾಟ ಮಾಡಲು ಹಿಂದೇಟು ಹಾಕಲಿಲ್ಲ. ಥಾಟ್ಟೀಕೇರೆ ಗ್ರಾಮದಲ್ಲಿ ಮದ್ಯದಂಗಡಿಯನ್ನು ಎತ್ತಂಗಡಿ ಮಾಡಲು ಸ್ವಸಹಾಯ ಸಂಘದ ಮಹಿಳೆಯರು ಕಲೆಕ್ಟರ್‌ವರೆಗೂ ತಮ್ಮ ಅಹವಾಲನ್ನು ತೆಗೆದುಕೊಂಡು ಹೋಗಿ, ಕೊನೆಗೂ ಸಫಲರಾದರು. ಇದೇ ರೀತಿ ಮುರುಥನ್ಕೋಡೆ ಗ್ರಾಮದಲ್ಲಿ ನಕಲಿ ಮದ್ಯ ತಯಾರಿಕೆಯ ಒಂದು ಫ್ಯಾಕ್ಟರಿಯನ್ನು ಮುಚ್ಚಿಸುವಲ್ಲಿ ಯಶಸ್ವಿಯಾದರು. ಇಲ್ಲಿ ಆಯುರ್ವೇದದ ಔಷಧಿಯಾದ ಅರಿಷ್ಟ ಎಂಬ ಹೆಸರಿನಲ್ಲಿ ನಕಲಿ ಮದ್ಯ ತಯಾರಿಸುವ ದಂಧೆ ನಡೆಯುತ್ತಿತ್ತು. ಎಷ್ಟೋ ಮಂದಿ ಇದನ್ನು ಕುಡಿದು ಮರಣವನ್ನೂ ಹೊಂದಿದ್ದರು. ಸ್ವಸಹಾಯ ಸಂಘದ ಸದಸ್ಯೆಯರು ಕಾನೂನಿನ ಪ್ರಕಾರ ಹೋರಾಟ ನಡೆಸಿ, ಈ ಫ್ಯಾಕ್ಟರಿಯ ಲೈಸೆನ್ಸನ್ನು ರದ್ದುಗೊಳಿಸಿದರು.

ಮಾನವೀಯ ಸಂವೇದನೆಗಳು ಶಿಥಿಲಗೊಳ್ಳುತ್ತಿರುವ ಈ ಸಮಯದಲ್ಲಿ ಈ ಸ್ವಸಹಾಯ ಸಂಘಗಳು ಮಾನವೀಯ ಸಹಯೋಗ ಮತ್ತು ಭ್ರಾತೃತ್ವದ ಹೊಸ ಅರಿವನ್ನು ಸೃಷ್ಟಿಸುವಲ್ಲಿ ಸಫಲವಾಗಿವೆ. ತಮಿಳುನಾಡಿನ ನಾಗರಕೋಯಿಲ್ ಪಟ್ಟಣದ ಹತ್ತಿರದ ಒಂದು ಗ್ರಾಮದಲ್ಲಿ ಸಂಘದ ಸದಸ್ಯೆಯರು ಭರತಕಲಿಯ 23 ವರ್ಷ ಪ್ರಾಯದ ವಿಧವಾ ಪುತ್ರಿ ಶಾಂತಿಯ ಪುನರ್ವಿವಾಹದ ಖರ್ಚನ್ನು ಭರಿಸಿದರು. ಇನ್ನೊಂದು ಗ್ರಾಮದಲ್ಲಿ ಕ್ಯಾನ್ಸರ್ ಪೀಡಿತ ಒಬ್ಬ ರೈತ ಮಹಿಳೆಯ ಸಾವಿನ ನಂತರ ಅಂತಿಮ ಸಂಸ್ಕಾರದಿಂದ ಹಿಡಿದು, ಅವಳ ಅನಾಥ ಮಕ್ಕಳಾದ ಅನಿತಾ ಹಾಗೂ ಕಲಾ ಇಬ್ಬರ ವಿವಾಹ ಪೂರೈಸುವ ತನಕವೂ ಪ್ರತೀ ಹಂತದಲ್ಲೂ ಸಹಾಯಹಸ್ತ ಚಾಚಿದ್ದರು. ಇಡೀ ಭಾರತದಲ್ಲಿ ಪ್ರಚಲಿತವಾಗಿರುವ "ವೈಭವಶ್ರೀ" ಹೆಸರಿನಿಂದ ಈ ರೀತಿಯ ಸ್ವಸಹಾಯ ಸಂಘಗಳು ತಲೆ ಎತ್ತಿ ನಿಂತಿವೆ. ಇವುಗಳ ಉದ್ದೇಶ ಸ್ವಸಹಾಯ, ಸ್ವಾವಲಂಬನೆ, ಸ್ವಾಭಿಮಾನ ಮತ್ತು ಪರಸ್ಪರ ವಿಶ್ವಾಸದಿಂದ ಕಾರ್ಯನಿರ್ವಹಿಸಿ, ಎಲ್ಲರ ಶುಭವನ್ನೂ, ಎಲ್ಲರ ವಿಕಾಸವನ್ನೂ ಬಯಸುವುದಾಗಿದೆ. ಇದರಿಂದ ಹಿಂದುಳಿದ, ದುರ್ಬಲ ಅಥವಾ ವಂಚಿತ ವರ್ಗಗಳಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಸಮ್ಮಾನದ ಭಾವವು ವೃದ್ಧಿಯಾಗುತ್ತಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಸಂಪರ್ಕ: ಸುಂದರ ಲಕ್ಷ್ಮಣ – 09443749595

ಸಂಪಾದಕೀಯ ಸಹಕಾರ: ರಾಧಾಕೃಷ್ಣ ಹೊಳ್ಳ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ರೂಪಶ್ರೀ ನಾಗರಾಜ್, ಕಿರಣ್ ಕುಮಾರ್ ವಿವೇಕವಂಶಿ

# ಸಂಘ ಶತಾಬ್ದಿಯ ವಿಶೇಷ ಸಂದರ್ಭದ ಸಂಕಲ್ಪ

## ವಿಶ್ವದ ಶಾಂತಿ ಮತ್ತು ಸಮೃದ್ಧಿಗಾಗಿ ಸಮರಸ ಹಾಗೂ ಸಂಘಟಿತ ಹಿಂದೂ ಸಮಾಜದ ನಿರ್ಮಾಣ

ಅನಾದಿ ಕಾಲದಿಂದಲೂ, ಹಿಂದೂ ಸಮಾಜವು ಮಾನವ ಏಕತೆ ಮತ್ತು ಸಾರ್ವತ್ರಿಕ ಕಲ್ಯಾಣವನ್ನು ಸಾಧಿಸುವ ಮಹಾನ್ ಧ್ಯೇಯವನ್ನು ನೆರವೇಸಲು ಬಹಳ ದೀರ್ಘವಾದ ಹಾಗೂ ಅಸಾಮಾನ್ಯ ಯಾತ್ರೆಯಲ್ಲಿ ತೊಡಗಿಕೊಂಡಿದೆ. ಸಂತರು, ಋಷಿಗಳು ಹಾಗೂ ಶ್ರೇಷ್ಠ ಮಹಿಳೆಯರು ಸೇರಿದಂತೆ ಮಹಾನ್ ವ್ಯಕ್ತಿಗಳ ಆಶೀರ್ವಾದ ಮತ್ತು ಪ್ರಯತ್ನಗಳಿಂದ, ನಮ್ಮ ರಾಷ್ಟ್ರವು ಹಲವಾರು ಏರುಪೇರುಗಳ ಹೊರತಾಗಿಯೂ ತನ್ನ ಈ ಪ್ರಯಾಣದಲ್ಲಿ ಮುನ್ನಡೆಯಲು ಸಾಧ್ಯವಾಗಿದೆ.

ನಮ್ಮ ರಾಷ್ಟ್ರೀಯ ಜೀವನದಲ್ಲಿ ಕಾಲಕ್ರಮೇಣ ನುಸುಳಿದ್ದ ದೌರ್ಬಲ್ಯಗಳನ್ನು ನಿರ್ಮೂಲನೆ ಮಾಡಲು ಮತ್ತು ಭಾರತವನ್ನು ಒಂದು ಸಂಘಟಿತ, ಸದ್ಗುಣಶೀಲ ಮತ್ತು ಶಕ್ತಿಶಾಲಿ ರಾಷ್ಟ್ರವಾಗಿ ವೈಭವದ ಶಿಖರಕ್ಕೆ (ಪರಮವೈಭವ) ಕೊಂಡೊಯ್ಯಲು 1925ರಲ್ಲಿ ಡಾ. ಕೇಶವ ಬಲಿರಾಮ್ ಹೆಡ್ಗೇವಾರ್ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಾರಂಭಿಸಿದರು. ಸಂಘಕಾರ್ಯದ ಬೀಜವನ್ನು ಬಿತ್ತಿದ ಡಾಕ್ಟರ್‌ಜೀ ದೈನಂದಿನ ಶಾಖೆಯ ರೂಪದಲ್ಲಿ ವಿಶಿಷ್ಟವಾದ ವ್ಯಕ್ತಿನಿರ್ಮಾಣದ ವಿಧಾನವನ್ನು ವಿಕಸನಗೊಳಿಸಿದರು. ಇದು ನಮ್ಮ ಶಾಶ್ವತ ಪರಂಪರಾಗತ ಮೌಲ್ಯಗಳು ಮತ್ತು ನೀತಿಗಳಿಗೆ ಅನುಗುಣವಾಗಿ ರಾಷ್ಟ್ರವನ್ನು ನಿರ್ಮಿಸುವ ನಿಸ್ವಾರ್ಥ ತಪಸ್ಸಾಯಿತು.

ಈ ಉಪಕ್ರಮವು ಡಾ. ಹೆಡಗೇವಾರ್ ಅವರ ಜೀವಿತಾವಧಿಯಲ್ಲಿಯೇ ದೇಶಾದ್ಯಂತ ಹರಡಿತ್ತು. ಸನಾತನ ಶಾಶ್ವತ ಚಿಂತನೆಗಳ ಬೆಳಕಿನಲ್ಲಿ, ರಾಷ್ಟ್ರೀಯ ಜೀವನದ ವಿವಿಧ ಹಂತಗಳಲ್ಲಿ ಸಮಕಾಲೀನ ಸಂದರ್ಭಕ್ಕನುಸಾರವಾದ ವ್ಯವಸ್ಥೆಗಳನ್ನು ರೂಪಿಸುವ ಪ್ರಕ್ರಿಯೆಯು ಎರಡನೇ ಸರಸಂಘಚಾಲಕ ಪೂಜನೀಯ ಶ್ರೀ ಗುರೂಜಿ (ಮಾಧವ ಸದಾಶಿವ ಗೋಳ್ವಾಲ್ಕರ್) ಅವರ ದಾರ್ಶನಿಕ ನಾಯಕತ್ವದಲ್ಲಿ ಪ್ರಾರಂಭವಾಯಿತು.

ನೂರು ವರ್ಷಗಳ ಈ ಯಾತ್ರೆಯಲ್ಲಿ, ದೈನಂದಿನ ಶಾಖೆಯಲ್ಲಿ ಕಲಿತ ಮೌಲ್ಯಗಳೊಂದಿಗೆ, ಸಂಘವು ಸಮಾಜದ ಅಚಲ ನಂಬಿಕೆ ಮತ್ತು ಪ್ರೀತಿಯನ್ನು ಗಳಿಸಿದೆ. ಈ ಅವಧಿಯಲ್ಲಿ, ಸಂಘದ




ಸ್ವಯಂಸೇವಕರು ಗೌರವ ಮತ್ತು ಅವಮಾನಗಳು, ಒಪ್ಪಿಗೆ ಮತ್ತು ಅನಾದರಗಳನ್ನು ಮೀರಿ ಪ್ರೀತಿ ಮತ್ತು ವಿಶ್ವಾಸಗಳ ಬಲದಿಂದ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಲು ಶ್ರಮಿಸಿದ್ದಾರೆ. ಸಂಘದ ಶತಾಬ್ದಿಯ ಈ ಸಂದರ್ಭದಲ್ಲಿ, ಯಾರ ಆಶೀರ್ವಾದ ಮತ್ತು ಸಹಕಾರವು ಎಲ್ಲಾ ಪ್ರತಿಕೂಲತೆಗಳ ನಡುವೆ ಸದ್ದಿಲ್ಲದ ಸಮರ್ಪಣೆಯಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಕಾರ್ಯಕರ್ತರು ಮತ್ತು ಸ್ವಯಂಸೇವಕರ ಕುಟುಂಬಗಳಿಗೆ ಪ್ರಬಲ ಶಕ್ತಿಯನ್ನು ನೀಡಿದೆಯೋ ಅಂತಹ ಪೂಜ್ಯ ಸಂತರು ಮತ್ತು ಸಮಾಜದ ಸಜ್ಜನ ಶಕ್ತಿಯನ್ನು ನೆನೆಯುವುದು ನಮ್ಮ ಕರ್ತವ್ಯವಾಗಿದೆ.

ಭಾರತವು ಶ್ರೀಮಂತ ಸಂಪ್ರದಾಯಗಳನ್ನು ಹೊಂದಿರುವ ಒಂದು ಪ್ರಾಚೀನ ಸಂಸ್ಕೃತಿಯಾಗಿರುವುದರಿಂದ ಸಾಮರಸ್ಯದ ಜಗತ್ತನ್ನು ಸೃಷ್ಟಿಸುವ ಅನುಭವಾತ್ಮಕ ಕೌಶಲವನ್ನು ಹೊಂದಿದೆ. ನಮ್ಮ ಚಿಂತನೆಯು ವಿಭಜಕ ಮತ್ತು ಸ್ವಯಂ–ವಿನಾಶಕಾರಿ ಪ್ರವೃತ್ತಿಗಳಿಂದ ಇಡೀ ಮಾನವಕುಲವನ್ನು ರಕ್ಷಿಸುತ್ತದೆ ಹಾಗೂ ಸಜೀವ ಮತ್ತು ಜಡ ಘಟಕಗಳ ನಡುವೆ ಶಾಂತಿ ಹಾಗೂ ಏಕತೆಯ ಭಾವನೆಯನ್ನು ಮೂಡಿಸುತ್ತದೆ.

ಧರ್ಮದ ಅಡಿಪಾಯದ ಮೇಲೆ ನಿರ್ಮಿತವಾದ ಸ್ವ–ವಿಶ್ವಾಸದಿಂದ ತುಂಬಿದ ಸಂಘಟಿತ ಮತ್ತು ಸಾಮೂಹಿಕ ಜೀವನದ ಆಧಾರದ ಮೇಲೆ ಮಾತ್ರ ಹಿಂದೂ ಸಮಾಜವು ತನ್ನ ಜಾಗತಿಕ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ಈಡೇರಿಸಲು ಸಾಧ್ಯ ಎಂದು ಸಂಘವು ನಂಬುತ್ತದೆ. ಆದ್ದರಿಂದ, ಎಲ್ಲಾ ರೀತಿಯ ಬೇಧಭಾವಗಳನ್ನು ತಿರಸ್ಕರಿಸಿ ಸಾಮರಸ್ಯಪೂರ್ಣವಾಗಿ ವ್ಯವಹರಿಸುವ, ಪರಿಸರಸ್ನೇಹಿ ಜೀವನಶೈಲಿಯನ್ನು ಅನುಸರಿಸುವ, ಸ್ವತ್ವದ ಅಭಿಮಾನದಿಂದ ತುಂಬಿದ, ನಾಗರಿಕ ಕರ್ತವ್ಯಗಳಿಗೆ ಬದ್ಧರಾದ, ಮೌಲ್ಯಾಧಾರಿತ ಕುಟುಂಬಗಳ ಮಾದರಿ ಸಮಾಜವನ್ನು ನಿರ್ಮಿಸುವ ಸಂಕಲ್ಪ ಮಾಡುವುದು ನಮ್ಮ ಕರ್ತವ್ಯವಾಗಿದೆ. ಇದು ಸಮಾಜ ಎದುರಿಸುತ್ತಿರುವ ಎಲ್ಲ ಸವಾಲುಗಳನ್ನು ಹಾಗೂ ಸಮಸ್ಯೆಗಳನ್ನು ಶಮನಗೊಳಿಸಿ ಒಂದು ಶಕ್ತಿಯುತ, ಭೌತಿಕವಾಗಿ ಸಮೃದ್ಧ ಮತ್ತು ಆಧ್ಯಾತ್ಮಿಕತೆಯಿಂದ ತುಂಬಿದ ರಾಷ್ಟ್ರೀಯ ಜೀವನವನ್ನು ನಿರ್ಮಿಸಲು ಸಮರ್ಥರನ್ನಾಗಿಸುತ್ತದೆ.

ಇಡೀ ಸಮಾಜವನ್ನು ಸಜ್ಜನ ಶಕ್ತಿಯ ನಾಯಕತ್ವದಲ್ಲಿ ಒಟ್ಟಿಗೆ ಮುನ್ನಡಿಸಿ, ಸಮರಸ ಮತ್ತು ಸಂಘಟಿತ ಭಾರತವನ್ನು ವಿಶ್ವದ ಮುಂದೆ ಮಾದರಿಯಾಗಿ ನಿಲ್ಲಿಸಲು ಎಲ್ಲಾ ಸ್ವಯಂಸೇವಕರು ಕಟಿಬದ್ಧರಾಗಬೇಕೆಂದು ಅಖಿಲ ಭಾರತೀಯ ಪ್ರತಿನಿಧಿ ಸಭಾ ಕರೆ ನೀಡುತ್ತದೆ.

## ಬಾಂಗ್ಲಾದೇಶದ ಹಿಂದೂ ಸಮಾಜದ ಬೆಂಬಲಕ್ಕೆ ಒಗ್ಗಟ್ಟಿನಿಂದ ನಿಲ್ಲಲು ಎಬಿಪಿಎಸ್ 2025 ನಿರ್ಣಯ

ಬಾಂಗ್ಲಾದೇಶದ ಹಿಂದೂ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳು ಅಲ್ಲಿನ ಮೂಲಭೂತವಾದಿ ಇಸ್ಲಾಮಿಕ್ ಶಕ್ತಿಗಳಿಂದ ಎದುರಿಸುತ್ತಿರುವ ನಿರಂತರವಾದ ಮತ್ತು ಯೋಜನಾಬದ್ಧ ರೀತಿಯಲ್ಲಿ ನಡೆಯುತ್ತಿರುವ ಹಿಂಸಾಚಾರ, ಅನ್ಯಾಯ ಮತ್ತು ದಬ್ಬಾಳಿಕೆಗಳ ಕುರಿತು ಅಖಿಲ ಭಾರತೀಯ ಪ್ರತಿನಿಧಿ ಸಭಾ ಗಂಭೀರವಾಗಿ ಕಳವಳವನ್ನು ವ್ಯಕ್ತಪಡಿಸುತ್ತದೆ. ಇದು ಮಾನವ ಹಕ್ಕು ಉಲ್ಲಂಘನೆಯ ಗಂಭೀರ ಪ್ರಕರಣವಾಗಿದೆ.

ಬಾಂಗ್ಲಾದೇಶದ ಇತ್ತೀಚಿನ ಆಡಳಿತ ಬದಲಾವಣೆಯ ಸಂದರ್ಭದಲ್ಲಿ, ಮಠಗಳು, ದೇವಸ್ಥಾನಗಳು, ದುರ್ಗಾಪೂಜಾ ಪೆಂಡಾಲುಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳ ಮೇಲಿನ ದಾಳಿ, ದೇವರ ಪ್ರತಿಮೆಗಳನ್ನು ವಿರೂಪಗೊಳಿಸುವುದು, ಬರ್ಬರ ಹತ್ಯೆಗಳು, ಆಸ್ತಿಪಾಸ್ತಿ ದರೋಡೆ, ಮಹಿಳೆಯರ ಅಪಹರಣ ಮತ್ತು ಅತ್ಯಾಚಾರ, ಬಲವಂತದ ಮತಾಂತರ ಮೊದಲಾದ ಅನೇಕ ಘಟನೆಗಳು ನಿರಂತರ ವರದಿಯಾಗುತ್ತಲಿವೆ. ಈ ಎಲ್ಲ ಘಟನೆಗಳ ಮತೀಯ ಆಯಾಮವನ್ನು ನಿರಾಕರಿಸುವುದು ಮತ್ತು ಅವು ಕೇವಲ ರಾಜಕೀಯ ಪ್ರೇರಿತ ಎಂದು ಸಾಧಿಸುವುದು ಸತ್ಯದ ನಿರಾಕರಣೆಯೇ ಆಗಿದೆ, ಏಕೆಂದರೆ ಅಂತಹ ಘಟನೆಗಳಿಗೆ ಬಲಿಯಾದವರು ಬಹುತೇಕ ಹಿಂದೂ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರೇ ಆಗಿದ್ದಾರೆ.

ಬಾಂಗ್ಲಾದೇಶದಲ್ಲಿ ಮುಸ್ಲಿಂ ಮತಾಂಧರಿಂದ ಹಿಂದೂ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳು, ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ಹೊಸದೇನಲ್ಲ. ಬಾಂಗ್ಲಾದೇಶದದಲ್ಲಿ ಹಿಂದೂ ಜನಸಂಖ್ಯೆಯ ನಿರಂತರ ಇಳಿತ ಅವರ ಅಸ್ತಿತ್ವದ ಬಿಕ್ಕಟ್ಟನ್ನು ಎತ್ತಿ ತೋರಿಸುತ್ತದೆ (1951 ರಲ್ಲಿ 22%, ಇಂದು 7.95%). ಆದರೆ ಕಳೆದ ವರ್ಷ ಕಂಡ ಈ ಹಿಂಸಾಚಾರ ಮತ್ತು ದ್ವೇಷಕ್ಕೆ ಸರ್ಕಾರ ಮತ್ತು ಸಂಸ್ಥೆಗಳಿಂದ ಸಿಕ್ಕ ಬೆಂಬಲ ತೀವ್ರ ಕಳವಳಕಾರಿಯಾಗಿದೆ. ಇದರೊಂದಿಗೆ ಬಾಂಗ್ಲಾದೇಶದಲ್ಲಿ ನಿರಂತರವಾಗಿ ಬೆಳೆಯುತ್ತಿರುವ ಭಾರತ ವಿರೋಧಿ ಧೋರಣೆ ಎರಡೂ ದೇಶಗಳ ನಡುವಿನ ಸಂಬಂಧವನ್ನು ತೀವ್ರವಾಗಿ ಹಾನಿಗೊಳಿಸಬಹುದಾಗಿದೆ.

ಕೆಲವು ಅಂತರರಾಷ್ಟ್ರೀಯ ಶಕ್ತಿಗಳು ಬುದ್ಧಿಪೂರ್ವಕವಾಗಿ ಭಾರತದ ನೆರೆಹೊರೆಯ ಪ್ರದೇಶದಲ್ಲಿ ಅವಿಶ್ವಾಸ ಮತ್ತು ವೈರುಧ್ಯದ ವಾತಾವರಣವನ್ನು ನಿರ್ಮಾಣ ಮಾಡುತ್ತ ಒಂದು ದೇಶವನ್ನು ಇನ್ನೊಂದರ ವಿರುದ್ಧವಾಗಿಸಿ ಅಸ್ಥಿರತೆಯನ್ನು ಪ್ರಸರಿಸುವ ಪ್ರಯತ್ನವನ್ನು ಮಾಡುತ್ತಿವೆ. ಭಾರತ ವಿರೋಧಿ ವಾತಾವರಣ, ಪಾಕಿಸ್ತಾನ ಮತ್ತು 'ಡೀಪ್ ಸ್ಟೇಟ್' ಶಕ್ತಿಗಳ ಸಕ್ರಿಯತೆಯ ಮೇಲೆ ದೃಷ್ಟಿಯಿರಿಸಬೇಕು ಮತ್ತು ಅವುಗಳನ್ನು ಬಹಿರಂಗಪಡಿಸಬೇಕು ಎಂದು ಚಿಂತನಶೀಲ ವರ್ಗ ಮತ್ತು ಅಂತರರಾಷ್ಟ್ರೀಯ ವಿಷಯಗಳ ವಿಶೇಷಜ್ಞರಲ್ಲಿ ಪ್ರತಿನಿಧಿ ಸಭಾ ಆಗ್ರಹಿಸುತ್ತದೆ. ಇಲ್ಲಿನ ಸಂಪೂರ್ಣ ಪ್ರದೇಶವು ಸಮಾನ ಸಂಸ್ಕೃತಿ, ಇತಿಹಾಸ ಮತ್ತು ಸಾಮಾಜಿಕ ಸಂಬಂಧವನ್ನು ಹೊಂದಿದೆ ಎನ್ನುವ ತಥ್ಯವನ್ನು ಪ್ರತಿನಿಧಿ ಸಭಾ ಒತ್ತಿ ಹೇಳಬಯಸುತ್ತದೆ. ಹಾಗಾಗಿ ಒಂದು ಭಾಗದಲ್ಲಿ ಉಂಟಾಗುವ ತಳಮಳಗಳು ಇಡೀ ಪ್ರದೇಶದಲ್ಲಿ ಪ್ರಭಾವವನ್ನು ಬೀರುತ್ತವೆ. ಜಾಗೃತ ಜನರು ಭಾರತ ಮತ್ತು ನೆರೆಹೊರೆಯ ದೇಶಗಳ ಈ ಸಮಾನ ಪರಂಪರೆಯನ್ನು ಬಲಪಡಿಸಲು ಪ್ರಯತ್ನಿಸಬೇಕೆಂದು ಪ್ರತಿನಿಧಿ ಸಭಾ ಬಯಸುತ್ತದೆ.



ಈ ಕಾಲಖಂಡದ ಒಂದು ಗಮನೀಯ ಸಂಗತಿಯೆಂದರೆ ಬಾಂಗ್ಲಾದೇಶದ ಹಿಂದೂ ಸಮುದಾಯವು ಈ ದೌರ್ಜನ್ಯವನ್ನು ಶಾಂತಿಯುತ, ಒಗ್ಗಟ್ಟಿನ ಮತ್ತು ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಎದುರಿಸಿದೆ. ಹಾಗೆಯೇ, ಈ ಗಟ್ಟಿತನಕ್ಕೆ ಭಾರತ ಮತ್ತು ವಿಶ್ವದೆಲ್ಲೆಡೆಯ ಹಿಂದೂ ಸಮಾಜದಿಂದ ನೈತಿಕ ಮತ್ತು ಮಾನಸಿಕ ಬೆಂಬಲ ದೊರಕಿದೆ ಎನ್ನುವುದೂ ಶ್ಲಾಘನೀಯ ವಿಷಯವಾಗಿದೆ. ಭಾರತ ಮತ್ತು ವಿಶ್ವದ ಅನೇಕ ದೇಶಗಳ ಹಿಂದೂ ಸಂಘಟನೆಗಳು ಹಿಂಸಾಚಾರದ ವಿರುದ್ಧ ಕಳವಳದ ಧ್ವನಿಯನ್ನೆತ್ತಿದ್ದವು ಹಾಗೂ ಪ್ರದರ್ಶನಗಳು ಮತ್ತು ಮನವಿಗಳ ಮುಖಾಂತರ ಬಾಂಗ್ಲಾದೇಶದ ಹಿಂದೂಗಳ ಭದ್ರತೆ ಮತ್ತು ಗೌರವದ ರಕ್ಷಣೆಯನ್ನು ಆಗ್ರಹಿಸಿದವು. ಈ ವಿಷಯವು ವೈಶ್ವಿಕ ಸಮುದಾಯದ ಅನೇಕ ನಾಯಕರುಗಳಿಂದ ಬೇರೆ ಬೇರೆ ಸ್ತರಗಳಲ್ಲಿ ಎತ್ತಲ್ಪಟ್ಟಿತು.

ಭಾರತ ಸರ್ಕಾರವು ಬಾಂಗ್ಲಾದೇಶದ ಹಿಂದೂ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳ ಬೆಂಬಲಕ್ಕೆ ನಿಲ್ಲುವ ಮತ್ತು ಅವರ ರಕ್ಷಣೆಯ ಪ್ರತಿಪಾದನೆಯ ತನ್ನ ಪ್ರಬಲ ನಿರ್ಧಾರವನ್ನು ವ್ಯಕ್ತಪಡಿಸಿತು. ಭಾರತ ಸರ್ಕಾರವು ಈ ವಿಷಯವನ್ನು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದೊಡನೆ ಮತ್ತು ಅನೇಕ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಎತ್ತಿತು. ಬಾಂಗ್ಲಾದೇಶದ ಹಿಂದೂ ಸಮುದಾಯದ ಭದ್ರತೆ, ಗೌರವ ಮತ್ತು ಕಲ್ಯಾಣ ರಕ್ಷಣೆಗಾಗಿ ಮತ್ತು ಬಾಂಗ್ಲಾದೇಶದ ಸರ್ಕಾರದೊಂದಿಗೆ ನಿರಂತರ ಮತ್ತು ಅರ್ಥಪೂರ್ಣ ಸಂವಾದವನ್ನು ನಡೆಸುವ ಎಲ್ಲ ಪ್ರಯತ್ನಗಳನ್ನು ನಡೆಸಬೇಕು ಎಂದು ಪ್ರತಿನಿಧಿ ಸಭಾ ಭಾರತ ಸರ್ಕಾರವನ್ನು ಆಗ್ರಹಿಸುತ್ತದೆ.

ವಿಶ್ವಸಂಸ್ಥೆ ಮತ್ತು ವೈಶ್ವಿಕ ಸಮುದಾಯ ಮೊದಲಾದ ಅಂತರರಾಷ್ಟ್ರೀಯ ಸಂಸ್ಥೆಗಳ ಪದಾಧಿಕಾರದ ಸ್ಥಾನದಲ್ಲಿರುವವರು ಬಾಂಗ್ಲಾದೇಶದ ಹಿಂದೂ ಮತ್ತಿತರ ಅಲ್ಪಸಂಖ್ಯಾತ ಸಮುದಾಯಗಳ ಮೇಲಿನ ಅಮಾನವೀಯ ವ್ಯವಹಾರವನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಇಂತಹ ಹಿಂಸಾಚಾರದ ಚಟುವಟಿಕೆಗಳನ್ನು ನಿಲ್ಲಿಸಲು ಬಾಂಗ್ಲಾದೇಶದ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಪ್ರತಿನಿಧಿ ಸಭಾ ಅಭಿಪ್ರಾಯ ವ್ಯಕ್ತಪಡಿಸುತ್ತದೆ. ಹಾಗೆಯೇ, ವಿಶ್ವದ ಎಲ್ಲ ದೇಶಗಳ ಹಿಂದೂ ಸಮುದಾಯ ಮತ್ತು ನಾಯಕರು ಹಾಗೂ ಸಂಸ್ಥೆಗಳು ಬಾಂಗ್ಲಾದೇಶದ ಹಿಂದೂ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳ ಬೆಂಬಲಕ್ಕೆ ಒಗ್ಗಟ್ಟಿನಿಂದ ನಿಲ್ಲಬೇಕು ಎಂದು ಅಖಿಲ ಭಾರತೀಯ ಪ್ರತಿನಿಧಿ ಸಭಾ ಆಗ್ರಹಿಸುತ್ತದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th APRIL 2025

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 15-04-2025



# ಬೆಂಗಳೂರಿನ ಚನ್ನೇನಹಳ್ಳಿಯಲ್ಲಿ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭಾ 2025 ಸಂಪನ್ನ

ರಾಷ್ಟ್ರೀಯ ಸ್ವಯಂಸೇವಕ ಸಂಘದ ನೀತಿ ಹಾಗೂ ನಿರ್ಣಯಗಳನ್ನು ನಿರೂಪಿಸುವ ವಾರ್ಷಿಕ ಮಹಾಸಭೆಯಾದ ಅಖಿಲ ಭಾರತೀಯ ಪ್ರತಿನಿಧಿ ಸಭಾ ಬೈಠಕ್ ಮಾರ್ಚ್ 21, 22, 23, 2025 ಈ ಮೂರು ದಿನಗಳ ಕಾಲ ಬೆಂಗಳೂರಿನ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ನಡೆಯಿತು. ಸರಸಂಘಚಾಲಕ ಡಾ. ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆಯವರ ಉಪಸ್ಥಿತಿಯಲ್ಲಿ ನಡೆದ ಈ ಬೈಠಕ್‌ನಲ್ಲಿ 1482 ಪ್ರತಿನಿಧಿಗಳು ಭಾಗವಹಿಸಿದ್ದರು.

### ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಕೆ

ಪ್ರತಿವರ್ಷ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ರಾಷ್ಟ್ರಕ್ಕೆ ಮತ್ತು ಸಮಾಜಕ್ಕೆ ಕೊಡುಗೆಯನ್ನು ನೀಡಿ ನಮ್ಮನ್ನಗಲಿದ ನಾಡಿನ ಪ್ರಮುಖರಿಗೆ, ಆರೆಸ್ಸೆಸ್ ಹಿರಿಯ ಕಾರ್ಯಕರ್ತರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಈ ಬಾರಿ ದಕ್ಷಿಣ ಕೇರಳದ ಕೊಲ್ಲಂ ಪನ್ಮನ ಆಶ್ರಮ ಮಠಾಧಿಪತಿ ಸ್ವಾಮಿ ಪ್ರಣವಾನಂದ ತೀರ್ಥತ್ಥಪಾದರ್, ಮಾಲ್ವಾ ಪ್ರಾಂತದ ಸಂತ ಪೂಜ್ಯ ಸಿಯಾರಾಮ್ ಬಾಬಾ, ಸಂಸ್ಕೃತ ಮತ್ತು ವೇದ ಸಂಶೋಧನಾ ಕೇಂದ್ರದ ಸಂಸ್ಥಾಪಕ ಸಂತ ಸುಗ್ರೀವಾನಂದ ಜಿ ಮಹಾರಾಜರು, ಪಶ್ಚಿಮ ಮಹಾರಾಷ್ಟ್ರ ಜಗದ್ಗುರು ಶ್ರೀಶಾಂತ ತುಕಾರಾಮ್ ಮಹಾರಾಜರ ವಂಶಸ್ಥರಾದ ಶಿರೀಶ್ ಮಹಾರಾಜ್ ಮೋರೆ, ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್, ಪ್ರಸಿದ್ಧ ತಬಲಾ ವಾದಕ ಪದ್ಮಶ್ರೀ ಮತ್ತು ಪದ್ಮಭೂಷಣ ಉಸ್ತಾದ್ ಜಾಕಿರ್ ಹುಸೇನ್, ಕೊಂಕಣದ ಹಿರಿಯ ಪರಮಾಣು ವಿಜ್ಞಾನಿ ಪದ್ಮಶ್ರೀ ಮತ್ತು ಪದ್ಮವಿಭೂಷಣ ಡಾ. ರಾಜಗೋಪಾಲ್ ಚಿದಂಬರಂ, ಪ್ರಧಾನಮಂತ್ರಿಯ ಕೊಂಕಣದ ಚಲನಚಿತ್ರ ನಿರ್ದೇಶಕ ಶ್ಯಾಮ್ ಬೆನಗಲ್, ಕವಿ, ಬರಹಗಾರ, ಚಲನಚಿತ್ರ ನಿರ್ಮಾಪಕ ಪತ್ರಕರ್ತ, ಮಾಜಿ ರಾಜ್ಯಸಭಾ ಸದಸ್ಯ ಪ್ರೀತೀಶ್ ನಂದಿ, ಚಿತ್ತೌಡ್‌ನ ಮೇವಾರ್ ರಾಜವಂಶದ 76ನೇ ಉತ್ತರಾಧಿಕಾರಿ ಮಹಾರಾಣಾ ಮಹೇಂದ್ರ ಸಿಂಗ್, ವಿಶ್ವ ಹಿಂದೂ ಪರಿಷತ್‌ನ ಹಿರಿಯ ಕಾರ್ಯಕರ್ತ ಮತ್ತು ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ವಿಶ್ವಸ್ಥ ಕಾಮೇಶ್ವರ ಚೌಪಾಲ್, ವಿದರ್ಭ ಪೂರ್ವ ವಿಶ್ವ ವಿಭಾಗ ಸಂಯೋಜಕ್ ಶಂಕರ ತತ್ವವಾದಿ, ವಿದ್ಯಾಭಾರತಿ ಹಾಗೂ ಶಿಕ್ಷಾ ಸಂಸ್ಕೃತಿ ಮಾಜಿ ಅಧ್ಯಕ್ಷ ದೀನಾನಾಥ್ ಬಾತ್ರಾ, ದಕ್ಷಿಣ ಮಧ್ಯ ಕ್ಷೇತ್ರದ ಮಾಜಿ ಕ್ಷೇತ್ರ ಸಂಘಚಾಲಕ್ ಪರ್ವತರಾವ್ ಸೇರಿದಂತೆ ಅನೇಕರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗಿದೆ.



**ಕರ್ನಾಟಕದ ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ:** ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್ ಎಂ ಕೃಷ್ಣ, ಕರ್ನಾಟಕ ಉತ್ತರಪ್ರಾಂತದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪರಿಸರ ಪ್ರೇಮಿ ತುಳಸಿ ಗೌಡ, ಹೆಸರಾಂತ ಲೇಖಕ ನಾ ಡಿಸೋಜಾ (ನಾರ್ಬರ್ಟ್ ಡಿಸೋಜಾ), ಜನಪ್ರಿಯ ಕನ್ನಡ ಚಲನಚಿತ್ರ ಮತ್ತು ಕಿರುತೆರೆ ನಟ ಸರಿಗಮ ವಿಜಿ, ಪ್ರಖ್ಯಾತ ಶಿಕ್ಷಣ ತಜ್ಞ ಮತ್ತು ಕರ್ನಾಟಕದ ವಿಧಾನ ಪರಿಷತ್ತಿನ ಸದಸ್ಯ ದೊರೆಸ್ವಾಮಿ ನಾಯ್ಡು, ವನವಾಸಿ ಸಂಗೀತದ ಸಂರಕ್ಷಣೆಗಾಗಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸುಕ್ರಿ ಬೊಮ್ಮಗೌಡ, ವಿಶ್ವ ಹಿಂದೂ ಪರಿಷತ್‌ನ ಜ್ಯೇಷ್ಠ ಕಾರ್ಯಕರ್ತ ಬಿ ಎನ್ ಮೂರ್ತಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

# ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಸುದ್ದಿಗೋಷ್ಠಿಯ ಸಾರಾಂಶ

1923ರ ಈ ದಿನ ಹುತಾತ್ಮರಾದ ಸ್ವಾತಂತ್ರ್ಯ ಸೇನಾನಿಗಳಾದ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಅವರಿಗೆ ಗೌರವ ಸಲ್ಲಿಸುವ ಮೂಲಕ ಅಖಿಲ ಭಾರತೀಯ ಪ್ರತಿನಿಧಿ ಸಭಾದ ಪತ್ರಿಕಾಗೋಷ್ಠಿಯಲ್ಲಿ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ತಮ್ಮ ಮಾತನ್ನು ಆರಂಭಿಸಿದರು. ಈ ಮೂವರು ಯುವಕರು ಸ್ವಾತಂತ್ರ್ಯ ಚಳವಳಿಗೆ ನೀಡಿದ ಕೊಡುಗೆಯನ್ನು ಸ್ಮರಿಸಿದರು ಮತ್ತು ಸಮಾಜವು ಅವರ ತ್ಯಾಗದಿಂದ ಸ್ಫೂರ್ತಿ ಪಡೆಯಬೇಕೆಂದು ಕರೆ ನೀಡಿದರು

ನಂತರ, ಮಹಾರಾಣಿ ಅಬ್ಬಕ್ಕ ಅವರ 500ನೇ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಂಘದ ಹೇಳಿಕೆಯ ಕುರಿತು ಮಾತನಾಡಿದರು. "ಮಹಾರಾಣಿ ಅಬ್ಬಕ್ಕ ಅವರು ಭಾರತದ ಮಹಾನ್ ಮಹಿಳಾ ಸ್ವಾತಂತ್ರ್ಯ ಸೇನಾನಿ, ಕುಶಲ ಆಡಳಿತಗಾರ್ತಿ ಮತ್ತು ನಿರ್ಭೀತ ಯೋಧೆ" ಎಂದು ದತ್ತಾತ್ರೇಯ ಹೊಸಬಾಳೆ ಅವರು ಬಣ್ಣಿಸಿದರು. ಅಬ್ಬಕ್ಕ ಅವರು ಉಳ್ಳಾಲದ ಪುಟ್ಟ ರಾಜ್ಯವನ್ನು (ದಕ್ಷಿಣ ಕನ್ನಡದಲ್ಲಿ) ಪೋರ್ಚುಗೀಸರ ವಿರುದ್ಧ ಧೀರೋದ್ದಾತ್ತ ಹೋರಾಟದ ಮೂಲಕ ರಕ್ಷಿಸಿದರು ಎಂದು ಅವರು ಹೇಳಿದರು.

ಅಬ್ಬಕ್ಕ ಅವರ ಕೊಡುಗೆಯನ್ನು ಗೌರವಿಸಿ ಭಾರತ ಸರ್ಕಾರವು 2003ರಲ್ಲಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತ್ತು ಮತ್ತು 2009ರಲ್ಲಿ ಒಂದು ಗಸ್ತು ತಿರುಗುವ ಹಡಗಿಗೆ ಅವರ ಹೆಸರನ್ನು ಇಟ್ಟಿತ್ತು. ಅವರ ಧೈರ್ಯ ಮತ್ತು ನಾಯಕತ್ವ ಗುಣದಿಂದ ರಾಷ್ಟ್ರ ನಿರ್ಮಾಣಕ್ಕೆ ಸಮಾಜವು ಅವರಿಂದ ಸ್ಫೂರ್ತಿ ಪಡೆಯಬೇಕೆಂದು ದತ್ತಾತ್ರೇಯ ಹೊಸಬಾಳೆ ಅವರು ಆಶಿಸಿದರು.

ಮಾರ್ಚ್ 21ರಿಂದ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭೆ (ಎಬಿಪಿಎಸ್) ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡುತ್ತಾ, ಸಂಘವು ದೇಶದ ಪ್ರತಿಯೊಂದು ಸ್ಥಳಕ್ಕೂ ತಲುಪುವಲ್ಲಿ ಯಶಸ್ವಿಯಾಗಿದೆ. ರಾಷ್ಟ್ರವನ್ನು ಒಗ್ಗೂಡಿಸುವ ಕೆಲಸ ಮಾತ್ರವಲ್ಲದೆ, ಪ್ರಕೃತಿ ವಿಕೋಪಗಳ ಸಮಯದಲ್ಲಿ ಮತ್ತು ನಂತರ ಪರಿಹಾರ ಕಾರ್ಯಾಚರಣೆ ಮತ್ತು ಪುನರ್ವಸತಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದೆ ಎಂದರು.

2025ರ ವರ್ಷದ ವಿಜಯದಶಮಿ ದಿನದಂದು ಸಂಘವು 100 ವರ್ಷಗಳನ್ನು ಪೂರೈಸುತ್ತದೆ. ಈಗಾಗಲೇ ತಿಳಿಸಿದಂತೆ, ಮುಂದಿನ ವರ್ಷವು ತನ್ನ ಕೆಲಸದ ವಿಸ್ತರಣೆ ಮತ್ತು ಬಲಗೊಳಿಸುವಿಕೆಯತ್ತ ದೃಷ್ಟಿಯನ್ನು ಕೇಂದ್ರೀಕರಿಸುತ್ತದೆ. ನೂರನೇ ವರ್ಷ ಎನ್ನುವುದು ನಮಗೆ 1) ಆತ್ಮಾವಲೋಕನ ಮಾಡಿಕೊಳ್ಳುವ, 2) ಸಂಘದ ಕೆಲಸಕ್ಕೆ ಸಮಾಜದ ಬೆಂಬಲವನ್ನು ಹೆಚ್ಚಿಸಿಕೊಳ್ಳುವ ಮತ್ತು 3) ಸಮಾಜವನ್ನು ಸಂಘಟಿಸಲು ನಮ್ಮನ್ನು ಪುನರ್‌ಸಮರ್ಪಿಸಿಕೊಳ್ಳುವ ಸಮಯ ಎಂದರು. ಶತಮಾನದ ವರ್ಷದಲ್ಲಿ ನಾವು ಹೆಚ್ಚು ಎಚ್ಚರಿಕೆಯಿಂದ, ಗುಣಾತ್ಮಕವಾಗಿ ಮತ್ತು ಸಮಗ್ರವಾಗಿ ಕೆಲಸ ಮಾಡಲು ನಿರ್ಧರಿಸಿದ್ದೇವೆ ಎಂದರು.

ಎಬಿಪಿಎಸ್‌ನಲ್ಲಿ ಬಾಂಗ್ಲಾದೇಶದ ಬಗ್ಗೆ ಕೈಗೊಂಡ ನಿರ್ಣಯದ ಹೊರತಾಗಿ, ಆರ್‌ಎಸ್‌ಎಸ್‌ನ 100 ವರ್ಷಗಳ ಬಗ್ಗೆ 'ಸಂಕಲ್ಪ' (Resolve) ಕೈಗೊಂಡಿದೆ. ಡಾ. ಹೆಡಗೇವಾರ್ ಅವರು ಸಂಘದ ಸ್ಥಾಪನೆಯ ಸಮಯದಲ್ಲಿ ಹೇಳಿದಂತೆ, "ಸಂಘವು ಯಾವುದೇ ಹೊಸ ಕಾರ್ಯವನ್ನು ಪ್ರಾರಂಭಿಸಲಿಲ್ಲ. ಹಲವು ಶತಮಾನಗಳಿಂದ ನಡೆಯುತ್ತಿರುವ ಕಾರ್ಯವನ್ನು ಮುಂದುವರೆಸುತ್ತಿದೆಯಷ್ಟೆ" ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದರು.

2025ರ ವಿಜಯದಶಮಿ ದಿನದಿಂದ ಆರಂಭವಾಗುವ ಸಂಘ ಶತಾಬ್ದಿ (ಶತಮಾನ) ಸಮಯದಲ್ಲಿ ನಿರ್ದಿಷ್ಟ ಚಟುವಟಿಕೆಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ. ಅವು ಈ ಕೆಳಗಿನಂತಿವೆ:

1. ಶತಾಬ್ದಿ ವರ್ಷವು 2025ರ ವಿಜಯದಶಮಿಯ ದಿನದಿಂದ ಪ್ರಾರಂಭವಾಗುತ್ತದೆ. ಸರಸಂಘಚಾಲಕರು ಪ್ರತಿ ವರ್ಷದಂತೆ ಈ ಸಂದರ್ಭದಲ್ಲಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡುತ್ತಾರೆ. ಬರುವ ವರ್ಷದಲ್ಲಿ ದೇಶಾದ್ಯಂತ ಮಂಡಲ ಹಾಗೂ ನಗರ ಮಟ್ಟದಲ್ಲಿ ಗಣವೇಷಧಾರಿ ಸ್ವಯಂಸೇವಕರ ಕಾರ್ಯಕ್ರಮಗಳು ನಡೆಯುತ್ತವೆ ಎಂದರು.
2. 'ಪ್ರತಿ ಗ್ರಾಮ– ಪ್ರತಿ ವಸತಿ– ಪ್ರತಿ ಮನೆ' ಎಂಬ ಎಂಬ ಘೋಷಣೆಯೊಂದಿಗೆ ಮೂರು ವಾರಗಳ ಕಾಲ ಬೃಹತ್ ಪ್ರಮಾಣದ ಮನೆ–ಮನೆ ಸಂಪರ್ಕ ಅಭಿಯಾನವನ್ನು ಅಂದಾಜು 2025ರ ನವೆಂಬರ್‌ನಿಂದ 2026ರ ಜನವರಿವರೆಗೆ ಯೋಜಿಸಲಾಗಿದೆ. ಸಂಘದ ಕುರಿತು ಮುದ್ರಿತ ಸಾಹಿತ್ಯವನ್ನು ಈ ಸಂದರ್ಭದಲ್ಲಿ ವಿತರಿಸಲಾಗುವುದು. ಈ ಕಾರ್ಯಕ್ರಮವನ್ನು ಸ್ಥಳೀಯ ಘಟಕಗಳು ಮುನ್ನಡೆಸುತ್ತವೆ.
3. ಎಲ್ಲಾ ಮಂಡಲ ಅಥವಾ ವಸತಿಗಳಲ್ಲಿ ಹಿಂದೂ ಸಮ್ಮೇಳನಗಳನ್ನು ಆಯೋಜಿಸಲಾಗುವುದು. ದಿನನಿತ್ಯದ ಜೀವನದಲ್ಲಿ ಒಗ್ಗಟ್ಟು ಮತ್ತು ಸಾಮರಸ್ಯ, ರಾಷ್ಟ್ರದ ಕಾರಣಕ್ಕಾಗಿ ಎಲ್ಲರ ಕೊಡುಗೆ ಮತ್ತು ಪಂಚ ಪರಿವರ್ತನ ಕಾರ್ಯದಲ್ಲಿ ಪ್ರತಿಯೊಬ್ಬರ ಭಾಗವಹಿಸುವಿಕೆಯ ಸಂದೇಶವನ್ನು ನೀಡಲಾಗುವುದು.
4. ಮಂಡಲ/ನಗರ ಮಟ್ಟದಲ್ಲಿ ಸಾಮಾಜಿಕ ಸದ್ಭಾವ (ಸಾಮಾಜಿಕ ಸಾಮರಸ್ಯ) ಸಭೆಗಳನ್ನು ಆಯೋಜಿಸುವ ಮೂಲಕ ಸಾಮರಸ್ಯದಿಂದ ಬದುಕುವುದರ ಕುರಿತು ಜನಜಾಗೃತಿ ಮೂಡಿಸಲಾಗುವುದು. ಸಂಸ್ಕೃತಿಯ ಬೇರುಗಳನ್ನು ಮತ್ತು ಹಿಂದೂ ಗುಣವನ್ನು ಕಳೆದುಕೊಳ್ಳದೆ ಆಧುನಿಕ ಜೀವನವನ್ನು ನಡೆಸುವುದರ ಕುರಿತು ಈ ಸಭೆಗಳು ಬೆಳಕು ಚೆಲ್ಲುತ್ತವೆ. ಆಧುನಿಕ ಜೀವನ ನಡೆಸುತ್ತಿರುವವರಲ್ಲೂ ಸಂಸ್ಕೃತಿಯ ಬೇರುಗಳು ಇರಲು ಸಾಧ್ಯ ಎನ್ನುವುದನ್ನು ಕುಂಭಮೇಳದಲ್ಲಿ ಪುಣ್ಯಸ್ನಾನಕ್ಕಾಗಿ ಬಂದ ಕೋಟ್ಯಂತರ ಜನರೇ ಸಾಕ್ಷಿ.
5. ದೇಶದ ಎಲ್ಲ ಜಿಲ್ಲಾ ಮಟ್ಟದಲ್ಲಿ ಪ್ರಮುಖ ನಾಗರಿಕರ ಸಂವಾದಗೋಷ್ಠಿಗಳನ್ನು ಆಯೋಜಿಸಲಾಗುವುದು. ಈ ಕಾರ್ಯಕ್ರಮಗಳು ರಾಷ್ಟ್ರೀಯ ವಿಷಯಗಳ ಮೇಲೆ ಸರಿಯಾದ ದೃಷ್ಟಿಕೋನವನ್ನು ಮೂಡಿಸುವುದು ಮತ್ತು ಸಮಾಜದಲ್ಲಿ ಇರುವ ತಪ್ಪು ಕಥನಗಳನ್ನು (Narrative) ಸರಿಪಡಿಸುವುದರ ಮೇಲೆ ಕೇಂದ್ರೀಕೃತವಾಗಿರುತ್ತವೆ.
6. ಯುವಕರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಯೋಜಿಸಲಾಗುವುದು. 15 ರಿಂದ 30 ವರ್ಷದೊಳಗಿನ ಯುವಕರಿಗಾಗಿ ರಾಷ್ಟ್ರ ನಿರ್ಮಾಣ ಚಟುವಟಿಕೆಗಳು, ಸೇವಾ ಚಟುವಟಿಕೆಗಳು ಮತ್ತು ಪಂಚ ಪರಿವರ್ತನದ ಮೇಲೆ ಕೇಂದ್ರೀಕರಿಸುವ ಹಲವು ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು. ಕಾರ್ಯಕ್ರಮ ಯಾವ ರೀತಿ ಇರಬೇಕು ಎನ್ನುವುದನ್ನು ಪ್ರಾಂತದ ಘಟಕಗಳೇ ತಮ್ಮ ಅಗತ್ಯಕ್ಕೆ ತಕ್ಕಂತೆ ಯೋಜಿಸುತ್ತವೆ ಎಂದರು.




| ಕಾರ್ಯಸ್ಥಿತಿ | |
|---|---|
| 2024–25ರ ಅಂಕಿ ಅಂಶಗಳು | |
| ಒಟ್ಟು ಸ್ಥಾನ | 51570 |
| ಒಟ್ಟು ಶಾಖೆ | 83129 |
| ಒಟ್ಟು ಮಿಲನ್ | 32147 |

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.